

# ಜೀವನ ಹಾಗೂ ಮೃತ್ಯುಗಳಾಚೆ

ಅಖಿಲ ಭಾರತ ಪತ್ರಿಕೆ
ಡಿಸೆಂಬರ್ 2015

ಬೆಲೆ : 15/–



*Supreme Lord, teach us to be silent*
*so that in silence we may receive Thy force*
*and understand Thy will.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಜೀವನ ಹಾಗೂ ಮೃತ್ಯುಗಳಾಚೆ"


**ಅನು : ಡಾ. ಕೆ.ಎಸ್. ಆಮೂರ**

ಮೃತ್ಯು ಮತ್ತು ಅದಕ್ಕೆ ಸಂಬಂಧಿಸಿದ ಗೋಚರ ಸಂಗತಿ 3

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಮರಣದ ನಂತರ ಶ್ರೀ ಅರವಿಂದರ ರಕ್ಷಣೆ 13

ಮೃತ್ಯುವನ್ನು ಜಯಿಸುವುದು 17

**ಅನು : ಡಾ. ಕೆ.ಎಸ್. ಆಮೂರ**

ಮೃತ್ಯುವಿನ ಮೇಲೆ ಶ್ರೀಮಾತೆಯವರು ಕೈಕೊಂಡ ಕಾರ್ಯ 21

ಪೃಥ್ವಿಗಾಗಿ ಹೊಸ ಜೀವನವೊಂದರ ಪ್ರಾರಂಭಗಳು 27

ಎಂದೆಂದಿಗೂ ಇರುವ ದೈವೀ ಸಾನ್ನಿಧ್ಯ 28

ಅಮರತ್ವ ಹಾಗೂ ಮರಣರಹಿತ ಸ್ಥಿತಿ 40

**ಅನು : ಶ್ರೀ ವೀರೇಂದ್ರ ಸಿಂಪಿ**

ನಾನಿಲ್ಲಿದ್ದೇನೆ, ನಾನಿಲ್ಲಿದ್ದೇನೆ 41

**ವಾರ್ತಾಪತ್ರ** 47


**(All India Magazine)ದ ಸಂಪಾದಕರ ಟಿಪ್ಪಣಿ:**

ಅಸ್ತಿತ್ವ ಕುರಿತು ನಮ್ಮ ಸರ್ವಸಾಮಾನ್ಯ ದೃಷ್ಟಿಕೋನ ಭ್ರಮಾತ್ಮಕವೂ, ಎರಡು ರೂಪಗಳುಳ್ಳದ್ದೂ ಆಗಿರುತ್ತದೆ. ಅದರಲ್ಲಿ ತದ್ವಿರುದ್ಧವಾಗಿವೆ ಎಂದೆನಿಸುವ ಎರಡು ಭಾಗಗಳನ್ನು ಕತ್ತರಿಸಿ ತೆಗೆಯುತ್ತೇವೆ. ಇಲ್ಲವೆ ಏಕೈಕ ದೈವೀ ನೈಜತೆ ಹಲವಾರು ಭಾಗಗಳನ್ನು ಹೊಂದಿರುವ ಹಾಗೆ ನೋಡುತ್ತೇವೆ, ಆದರೆ ಅವುಗಳನ್ನು ಒಟ್ಟಿಗೆ ಹೆಣೆಯುವ ಎಳೆ ನಮಗೆ ಕಾಣಿಸುವುದಿಲ್ಲ. ವಿಶೇಷವಾಗಿ ಈ ವಿಭಜನೆ ಜೀವನ ಮತ್ತು ಮೃತ್ಯು, ದೇವ ಮತ್ತು ಜಗತ್ತು, ಒಳ್ಳೆಯದು ಮತ್ತು ಅನಿಷ್ಟವಾದದ್ದು ಇವೆಲ್ಲವುಗಳ ದ್ವಂದ್ವಗಳಲ್ಲಿ ಎದ್ದು ಕಾಣುತ್ತದೆ. ಜೀವನ ಮತ್ತು ಮೃತ್ಯು ಒಂದಕ್ಕೊಂದು ವಿರುದ್ಧವಾದವುಗಳೆಂದು ನಾವು ನೋಡುತ್ತೇವೆ. ನಮಗೆ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಇವರ ಅನುಗ್ರಹದಿಂದ ದೊರೆತ ಆಳಾತಿ ಆಳದ ದರ್ಶನಕ್ಕೆ ಅವು ವೈರುಧ್ಯಗಳಾಗಿರುವುದಿಲ್ಲ, ಆದರೆ ಒಂದಕ್ಕೊಂದು ಪೂರಕವಾಗಿರುವ ವಿಧಾನಗಳಂತೆ, ಒಂದೇ ದೈವೀ ನೈಜತೆಯ ಎರಡು ಬದಿಗಳಾಗಿರುವಂತೆ ತೋರಿಬರುತ್ತವೆ. ಪರಿವರ್ತನೆಗೊಳಗಾದ ಜೀವನವೊಂದರಲ್ಲಿ ಇತರ ದ್ವಂದ್ವಗಳು ಹಾಗೂ ಭ್ರಮೆಗಳು ತಮ್ಮ ನಿಜವಾದ ಮೌಲ್ಯದಲ್ಲಿ ಪರಿವರ್ತನೆಗೊಂಡು, ಇಡಿಯಾದುದರ ಭಾಗವೆಂದು ತೋರಿಬರುವ ರೀತಿಯಲ್ಲಿ ಜೀವನ ಹಾಗೂ ಮೃತ್ಯು ತಮ್ಮ ಅರ್ಥವನ್ನು, ಕಾರ್ಯ ವಿಧಾನವನ್ನು ಬದಲು ಮಾಡುತ್ತವೆ ಮತ್ತು ಅಂತಿಮವಾಗಿ ಸದ್ಯ ಒರಟಾಗಿ ಪ್ರತಿನಿಧಿಸುತ್ತಿರುವ ಅವು ಬೇರೆ ಏನೋ ಒಂದರಲ್ಲಿ ಉತ್ಕ್ರಾಂತಿ ಹೊಂದುತ್ತವೆ ಮತ್ತು ಬೆಸುಗೆಗೆ ಒಳಗಾಗುತ್ತವೆ. ಸದ್ಯದ ಸಂಚಿಕೆ ಜೀವನವನ್ನು ಮತ್ತು ಮೃತ್ಯುವನ್ನು ಕುರಿತು ನಮ್ಮ ಗ್ರಹಿಕೆಯಲ್ಲಿ ಹಾಗೂ ತಿಳಿವಳಿಕೆಯಲ್ಲಿ ಈ ಮೂಲಭೂತ ಪಲ್ಲಟದೊಂದಿಗೆ ವ್ಯವಹರಿಸುತ್ತದೆ.

*

## ಮೃತ್ಯು ಮತ್ತು ಅದಕ್ಕೆ ಸಂಬಂಧಿಸಿದ ಗೋಚರ ಸಂಗತಿ

**ಪ್ರಶ್ನೆ :** *ನಿದ್ರೆ ಮತ್ತು ಮೃತ್ಯು ಇವೆರಡರ ನಡುವೆ ವ್ಯತ್ಯಾಸವಿದೆಯೆ? ಇಲ್ಲವೆ ಅವೆರಡೂ ಒಂದೇ ಬಗೆಯವಾಗಿವೆಯೆ?*

**ಶ್ರೀಮಾತೆ :** ಓಹ್, ಇಲ್ಲ. ಸಮಾಧಿಯ ಬುದ್ಧಿಗ್ರಾಹ್ಯ ಸ್ಥಿತಿ ಮೃತ್ಯುವಿದ್ದ ಹಾಗಿರುತ್ತದೆ, ಸರಿ, ಆದರೆ ಅಲ್ಲಿ ಕೇವಲ ಒಂದು ಕೊಂಡಿ ಉಳಿದುಕೊಂಡಿರುತ್ತದೆ – ಹಾಗಿಲ್ಲದಿದ್ದರೆ ಮನುಷ್ಯ ಇಡಿಯಾಗಿ ಹೊರಟು ಹೋಗಿರುತ್ತಾನೆ. ವಾಸ್ತವದಲ್ಲಿ ಮನುಷ್ಯ ಇಡಿಯಾಗಿ ಹೊರಟು ಹೋದಾಗ ಮಾತ್ರ ಅದು ಮೂರ್ಛೆಯ ಸ್ಥಿತಿಯಲ್ಲಿರುತ್ತದೆ, ಹಾಗಿಲ್ಲದಿದ್ದರೆ ಪ್ರಾಣಿಕದಲ್ಲಿ ಅತ್ಯಂತ ಪ್ರಾಪಂಚಿಕವೆನಿಸಿದ್ದು ಉಳಿದುಕೊಂಡಿರುತ್ತದೆ.

**ಪ್ರಶ್ನೆ :** *ನೀವು ನಿದ್ರೆಯಲ್ಲಿ ಸಾಗಿ ಹೋಗುವ ಸ್ಥಳಗಳು ಮೃತ್ಯುವಿನ ನಂತರ ಹೋಗುವಂತಹ ಸ್ಥಳಗಳೇ ಆಗಿರುತ್ತವೆಯೆ?*

**ಶ್ರೀಮಾತೆ :** ಇಲ್ಲ. ಕೆಲವೊಂದು ಅಪವಾದಗಳನ್ನು ಹೊರತುಪಡಿಸಿ, ಮನುಷ್ಯ ತನ್ನ ಮಿದುಳಿನಿಂದ ಬರುವ ಅವಚೇತನ, ಭಾವನಾತ್ಮಕ ಅವಚೇತನ, ಲೌಕಿಕ ಅವಚೇತನ ಇವೆಲ್ಲವುಗಳ ಪ್ರಭಾವದ ಜೊತೆಗೆ (ಕೆಲವೊಂದು ಅಪವಾದಗಳನ್ನು ಹೊರತು ಪಡಿಸಿ) ನಿದ್ರೆಯಲ್ಲಿ ಸಂಪರ್ಕ ಹೊಂದಿರುತ್ತಾನೆ. ಇವು ಜನರು ಕಾಣುವ ಕನಸುಗಳಲ್ಲಿ ಶೇಕಡಾ ತೊಂಬತ್ತೊಂಬತ್ತುವರೆ ಭಾಗವನ್ನು ಉತ್ಪಾದಿಸುತ್ತವೆ. ಸಾಮಾನ್ಯವಾಗಿ, ಕೆಲವೊಮ್ಮೆ, ಮನಸ್ಸು ಅಲೆದಾಡುತ್ತ ಹೋಗುತ್ತದೆ, ಆದರೆ ಅದು ಮರಳಿ ಬಂದಾಗ ಆ ಸಮಯದ ತೊಂಬತ್ತೊಂಬತ್ತುವರೆ ಭಾಗದ ಏನನ್ನೂ ಮನುಷ್ಯ ನೆನಪಿಗೆ ತಂದುಕೊಳ್ಳಲಾರ, ಏಕೆಂದರೆ ಕೊಂಡಿಯನ್ನು ಸಮರ್ಪಕವಾಗಿ ಸ್ಥಾಪಿಸಲಾಗಿರುವುದಿಲ್ಲ.

ನಿದ್ರೆಯ ಉದ್ದೇಶ ಸಚ್ಚಿದಾನಂದದ ಪ್ರಜ್ಞೆಯ ಜೊತೆಗೆ ಸಂಪರ್ಕವನ್ನು ಮತ್ತೆ ಸ್ಥಾಪಿಸಬೇಕಾಗಿರುತ್ತದೆ. ಆದರೆ ನೂರು ಜನರಲ್ಲಿ ಒಬ್ಬನಾದರೂ ಅದನ್ನು ಮಾಡುವನೆಂದು ನನಗನಿಸುವುದಿಲ್ಲ. ಸಚ್ಚಿದಾನಂದದಲ್ಲಿ ಪ್ರವೇಶಿಸುವುದಕ್ಕಿಂತ ಹೆಚ್ಚಾಗಿ ಅವರು ಅಪ್ರಜ್ಞೆಯಲ್ಲಿ ಪ್ರವೇಶಿಸುತ್ತಾರೆ.

ನನ್ನ ಮಗು, ಆದಾಗ್ಯೂ ಎರಡು ನಿದ್ರೆಗಳು ಒಂದೇ ಬಗೆಯವಾಗಿರುವುದಿಲ್ಲ ಮತ್ತು ಮೃತ್ಯುಗಳನ್ನು ಕುರಿತು ಅದು ಹಾಗೇ ಇದೆ. ಆದರೆ ನಿದ್ರೆ ಮತ್ತು ಮೃತ್ಯು ಇವು ಬೇರೆ ಬೇರೆ ಸ್ಥಿತಿಗಳು. ನಿಮಗೆ ದೇಹ ಇರುವವರೆಗೆ ಮೃತ್ಯುವಿನ ನಂತರ ಇರುವ ಸ್ಥಿತಿ ನಿಮ್ಮದಾಗಿರುವುದಿಲ್ಲ. ನೀವು ಮೃತ್ಯು ಹೊಂದಿರುವಿರಿ ಎಂದು ವೈದ್ಯರು ಸಾರಿ ಹೇಳಿದ ನಂತರ ಏಳು ದಿನಗಳ ಕಾಲದಲ್ಲಿ ನೀವು ಇನ್ನೂ ಮಧ್ಯಂತರದ ಸ್ಥಿತಿಯಲ್ಲಿರುತ್ತೀರಿ, ಆದರೆ ಮೃತ್ಯುವಿನ ವಾಸ್ತವ ಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ, ಏಕೆಂದರೆ ಅದಕ್ಕೆ ಇನ್ನು ಮುಂದೆ ಭೌತಿಕ ಆಧಾರವಿರುವುದಿಲ್ಲ.



... ಇಲ್ಲ, ನಿದ್ರೆಯದು ಬೇರೆ ಒಂದು ವಿಷಯ ... ಹೌದು, ಬೇರೆ ಏನೋ ಒಂದು. ಅದು ಹೆಚ್ಚಿನ ರೀತಿಯಲ್ಲಿ ಅಚೇತನದಲ್ಲಿ ಪತನಗೊಂಡ ಹಾಗಿರುತ್ತದೆ – ಅದು ತಮಸ್ಸಿನ ಆಕ್ರಮಣ. ಅಚೇತನದ ಆಳಗಳಲ್ಲಿ ದೈವೀ ಪ್ರಜ್ಞೆ ಇರುತ್ತದೆಂಬುದು ನಮಗೆ ತಿಳಿದಿದೆ, ಅದು ಹಾಗಿದ್ದಾಗಲೂ ಕೂಡ ನಿದ್ರೆ ಒಂದು ಪತನವಿದ್ದ ಹಾಗೆ. ಅಚೇತನದಲ್ಲಿ ಮರಳಿ ಹೋಗಿ ಪೂರ್ತಿ ಪತನಗೊಳ್ಳುವ ಜನರಿದ್ದಾರೆ, ಮತ್ತು ಅವರು ನಿದ್ರೆಯಿಂದ ಹೊರಬಂದಾಗ, ನಿದ್ರೆಯಲ್ಲಿ ಪ್ರವೇಶಿಸುವಾಗಿನಗಿಂತ ಹೆಚ್ಚು ಮಬ್ಬಾದವರಾಗಿರುತ್ತಾರೆ.

**(ಅನುಯಾಯಿಯೊಂದಿಗೆ ಮಾತುಕತೆ, 5–8–1961) – ಶ್ರೀಮಾತೆ**

*

### ಸಮಾಧಿ, ದೇಹಕ್ಕೆ ಬಾಹ್ಯವಾಗಿರುವುದರಲ್ಲಿ ಆದ ಅನುಭವ ಮತ್ತು ಮೃತ್ಯು

ಅಲ್ಲಿ ಬೇರೊಂದು ವಿಷಯವಿತ್ತು. (ನಗುತ್ತಾರೆ), ಚಿಕ್ಕ ಬಾಲಕಿಯಾಗಿದ್ದಾಗಲೂ ಕೂಡ ನಾನು ಕಾರ್ಯದ ಮಧ್ಯೆ, ಮಾತಿನ ಮಧ್ಯೆ ಇಲ್ಲವೆ ಇಂತಹದೇನಾದರೊಂದರ ನಡುವೆ ಒಮ್ಮಿಂದೊಮ್ಮೆಗೆ ಸಮಾಧಿ ಸ್ಥಿತಿಯಲ್ಲಿ ಪ್ರವೇಶಿಸುತ್ತಿದ್ದೆ – ಅಲ್ಲಿ ಯಾರಿಗೂ ಅದೇನೆಂಬುದು ತಿಳಿದಿರಲಿಲ್ಲ! ನಾನು ನಿದ್ರೆಯ ಸ್ಥಿತಿಗೆ ಹೋದೆನೆಂದು ಎಲ್ಲರೂ ಯೋಚಿಸುತ್ತಿದ್ದರು. ಆದರೆ ನಾನು ಒಂದು ತೋಳನ್ನು ಮೇಲೆತ್ತಿ ಹಿಡಿದು ಇಲ್ಲವೆ ವಾಕ್ಯವೊಂದರ ಮಧ್ಯೆ ಪ್ರಜ್ಞಾಪೂರ್ವಕಳಾಗಿ ಉಳಿದುಕೊಳ್ಳುತ್ತಿದ್ದೆ. ಬಾಹ್ಯದಲ್ಲಿ ಯಾರೂ ಇರುತ್ತಿರಲಿಲ್ಲ (ಶ್ರೀಮಾತೆಯವರು ನಗುತ್ತಾರೆ), ಆದರೆ ಆಂತರಿಕವಾಗಿ ಬಹಳ ಗಾಢವಾದ ಹಾಗೂ ಸ್ವಾರಸ್ಯಕರವಾದ ಅನುಭವವಿರುತ್ತಿತ್ತು. ನಾನು ಬಹಳ ಚಿಕ್ಕವಳಿದ್ದಾಗಲೂ ಅಂತಹದು ಸಂಭವಿಸುತ್ತಿತ್ತು. ...

ಈ ಕಾಲಾವಧಿಯಲ್ಲಿ ನಾನು ಪ್ರತಿದಿನ ರಾತ್ರಿ ದೇಹದಿಂದ ಹೊರಗೆ ಹೋಗುತ್ತಿದ್ದೆ ಮತ್ತು "ಪ್ರಾರ್ಥನೆಗಳು ಹಾಗೂ ಧ್ಯಾನಗಳು" ಗ್ರಂಥದಲ್ಲಿ ಪ್ರಾಸಂಗಿಕವಾಗಿ ಹೇಳಿದಂತಹ ಕಾರ್ಯವನ್ನು ಕೈಕೊಳ್ಳುತ್ತಿದ್ದೆ.[1] ಪ್ರತಿದಿನ ರಾತ್ರಿ,

1. CWM, 1/81–82, February 22, 1914

ಅದೇ ಗಂಟೆಯ ಸಮಯದಲ್ಲಿ, ಇಡೀ ಮನೆ ಬಹಳ ಶಾಂತವಾಗಿ ಇರುತ್ತಿತ್ತು. ನಾನು ದೇಹದ ಹೊರಗೆ ಹೋಗಿ ಎಲ್ಲ ಬಗೆಯ ಅನುಭವ ಪಡೆದುಕೊಳ್ಳುತ್ತಿದ್ದೆ. ನಂತರ ನನ್ನ ದೇಹ ಕ್ರಮೇಣ ನಿದ್ರೆಯಲ್ಲಿ ನಡೆದಾಡುವವರದಂತಾಯಿತು (ಎಂದರೆ ರೂಪದ ಪ್ರಜ್ಞೆ ಹೆಚ್ಚು ಹೆಚ್ಚಾಗಿ ಪ್ರಜ್ಞಾಪೂರ್ವಕವಾಯಿತು, ಅದು ಹಾಗಿರುವಾಗ ಕೊಂಡಿ ಗಟ್ಟಿಯಾಗಿ ಸ್ಥಾಪಿತಗೊಂಡಿತು.) ನಾನು (ನಿದ್ರೆಯಲ್ಲಿ) ಮೇಲಕ್ಕೆದ್ದು ಬಿಡುವುದನ್ನು ರೂಢಿ ಮಾಡಿಕೊಂಡೆ – ಸಾಮಾನ್ಯ ನಿದ್ರೆಯಲ್ಲಿ ನಡೆದಾಡುವವರ ರೀತಿಯಲ್ಲಲ್ಲ. ಮೇಲಕ್ಕೆದ್ದು ಡೆಸ್ಕನ್ನು ತೆರೆಯುತ್ತಿದ್ದೆ. ಒಂದು ಹಾಳೆಯನ್ನು ಕೈಗೆತ್ತಿಕೊಳ್ಳುತ್ತಿದ್ದೆ ಮತ್ತು ಅದರ ಮೇಲೆ ಕವಿತೆಗಳನ್ನು ಬರೆಯುತ್ತಿದ್ದೆ. ನನ್ನಲ್ಲಿ ಕವಿಯ ಯಾವ ಗುಣಲಕ್ಷಣವೂ ಇರಲಿಲ್ಲ! ನಾನು ಹಾಳೆಯ ಮೇಲೆ ವಿಷಯಗಳನ್ನು ಬರೆಯುತ್ತಿದ್ದೆ ಮತ್ತು ನಂತರ ಬಹಳ ಪ್ರಜ್ಞಾಪೂರ್ವಕವಾಗಿ ಪ್ರತಿಯೊಂದನ್ನು ಮರಳಿ ಕಾಳಜಿಪೂರ್ವಕ ಡೆಸ್ಕಿನ ಡ್ರಾವರನಲ್ಲಿಟ್ಟು ಅದಕ್ಕೆ ಕೀಲಿ ಹಾಕುತ್ತಿದ್ದೆ ಮತ್ತು ಹಾಸಿಗೆಯ ಮೇಲೆ ಮಲಗಲು ಹೋಗುತ್ತಿದ್ದೆ.

**(ಅನುಯಾಯಿಯೊಂದಿಗೆ ಮಾತುಕತೆ, 5–8–1961) – ಶ್ರೀಮಾತೆ**

*

**ಮೃತ್ಯುವಿನ ಪ್ರಾಂತದಲ್ಲಿ ಪ್ರಜ್ಞಾಪೂರ್ವಕ ಪ್ರವೇಶ ಮಾಡುವುದು**

**ಪ್ರಶ್ನೆ :** *ಪ್ರಜ್ಞಾಪೂರ್ವಕವಾಗಿ ಮೃತ್ಯುವಿನಲ್ಲಿ ಪ್ರವೇಶಿಸುವುದು ಮತ್ತು ಮನುಷ್ಯ ತನ್ನ ದೇಹದಿಂದ ಪ್ರಜ್ಞಾಪೂರ್ವಕವಾಗಿ ಹೊರಗೆ ಹೋಗುವುದು ಇವುಗಳ ನಡುವೆ ಇರುವ ವ್ಯತ್ಯಾಸ ಯಾವುದು? ಬಹಳಷ್ಟು ಜನರು ತಮ್ಮ ದೇಹದ ಹೊರಗೆ ಹೋಗಬಲ್ಲರಲ್ಲವೆ?*

**ಶ್ರೀಮಾತೆ :** ಹೌದು, ಆದರೆ ಅವರೆಲ್ಲರೂ ಮೃತ್ಯುವಿನ ಪ್ರಾಂತದಲ್ಲಿ ಸಾಗಿ ಹೋಗುವುದಿಲ್ಲ.

**ಪ್ರಶ್ನೆ :** *ಹಾಗೆ ಸಾಗಿ ಹೋಗುವ ವಿಧಾನ ದೇಹದಿಂದ ಹೊರಗೆ ಹೋಗುವ ಹಾಗೆಯೇ ಇರುತ್ತದೆಯೆ?*

**ಶ್ರೀಮಾತೆ :** ಹೌದು, ಆದರೆ ಅದು ಪ್ರಾರಂಭ ಮಾತ್ರ. ದೇಹದಿಂದ ಹೊರಗೆ ಹೇಗೆ ಹೋಗಬೇಕು ಎಂಬುದರಿಂದ ಮನುಷ್ಯ ಪ್ರಾರಂಭಿಸುತ್ತಾನೆ. ಬಹಳಷ್ಟು ಜನರು ನಿದ್ರಿಸಲು ಪ್ರಾರಂಭಿಸಿದ ಕೂಡಲೆ ತಮ್ಮ ದೇಹದಿಂದ ಹೊರಗೆ ಹೋಗುತ್ತಾರೆ,



ಅದನ್ನು ಅವರು ಹೆಚ್ಚು ಕಡಿಮೆ ಪ್ರಜ್ಞಾಪೂರ್ವಕವಾಗಿ ಕೈಕೊಳ್ಳುತ್ತಾರೆ, ಅವರಲ್ಲಿ ಹೆಚ್ಚಿನ ಭಾಗದ ಜನರು ಪ್ರಜ್ಞಾರಹಿತರಾಗಿ ಹಾಗೆ ಮಾಡುತ್ತಾರೆ, ಆದಾಗ್ಯೂ ಪ್ರಜ್ಞಾಪೂರ್ವಕವಾಗಿ ಅದನ್ನು ಕೈಕೊಳ್ಳುವ ಕೆಲವು ಜನರಿದ್ದಾರೆ. ಅವರು ದೇಹದಿಂದ ಹೊರಗೆ ಹೋಗುತ್ತಾರೆ, ಆದರೆ ಭೌತಿಕ ಪ್ರಾಂತದಲ್ಲಿ ಉಳಿದುಕೊಳ್ಳುತ್ತಾರೆ. ಅತಿ ಹೆಚ್ಚೆಂದರೆ ಮಾನಸಿಕ ಪ್ರಾಂತದಲ್ಲಿ ಅವರು ಹೋಗಬಲ್ಲರು, ಆದರೆ ಮೃತ್ಯುವಿನ ಪ್ರಾಂತದಲ್ಲಿ ಹೋಗುವುದಿಲ್ಲ.

ಅಲ್ಲಿಗೆ ಹೋಗುವ ಕೆಲವು ಜನರಿದ್ದಾರೆ, ಆದರೆ ಆ ವಿಧಾನ ಸಂಪೂರ್ಣವಾಗ–ಬೇಕಾದರೆ ಮನುಷ್ಯ ತನ್ನ ದೇಹಕ್ಕೆ ಕಟ್ಟಲಾಗಿರುವ ಕೆಲವೊಂದು ಕೊಂಡಿಗಳೊಂದಿಗೆ ಸಂಬಂಧ ಉಳಿಸಿಕೊಂಡಿರಬೇಕೆಂಬುದನ್ನು ತಿಳಿದುಕೊಂಡಿರಬೇಕು, ಆ ಕೊಂಡಿಗಳು ಪ್ರಾಣಿಕವಾದವುಗಳಾಗಲಿ, ಮಾನಸಿಕವಾದವುಗಳಾಗಲಿ, ಚೈತ್ಯಾತ್ಮಿಕವಾದವುಗಳಾಗಲಿ ಆಗಿರಬೇಕು – ಮನುಷ್ಯ ದೇಹದಿಂದ ಹೊರಗೆ ಹೋದಾಗ, ಹೊರಗೆ ಹೋಗುವಂತಹವು ಎಲ್ಲ ಬಗೆಯ ವಿಷಯಗಳಾಗಿರಬಹುದು. ಸಾಮಾನ್ಯವಾಗಿ ದೇಹದಿಂದ ಹೊರಗೆ ಹೋಗುವಂತಹದು ಮನಸ್ಸು ಇಲ್ಲ ಉಚ್ಚತರ ಪ್ರಾಣಿಕ ಇವುಗಳಂತಹ ಬಹಳ ಸೂಕ್ಷ್ಮವಾದದ್ದಾಗಿರುತ್ತದೆ, ಮತ್ತು ಬಹಳಷ್ಟು ದೇಹದಲ್ಲಿ ಉಳಿದುಕೊಂಡಿರುತ್ತದೆ, ಹಾಗೆ ಉಳಿದುಕೊಂಡದ್ದು ದೇಹ ಸಮಾಧಿ ಸ್ಥಿತಿಯಲ್ಲಿ ಪ್ರವೇಶಿಸುವುದಕ್ಕೆ ಸಾಕಷ್ಟಾಗುತ್ತದೆ. ನಿದ್ರೆ ಮಾಡುವವರಲ್ಲಿ ಕೆಲವರು ನಿದ್ರೆ ಮಾಡುತ್ತ ನಡೆದಾಡುತ್ತಾರೆ, ಅವರ ಸತ್ತೆಯ ಒಂದು ಭಾಗ ಬಾಹ್ಯೀಕರಣಗೊಂಡಿರುತ್ತದೆ, ಆದರೆ ಅವರ ಪ್ರಾಣಿಕ ಸತ್ತೆಯ ಬಹಳಷ್ಟು ಭಾಗ ದೇಹದಲ್ಲಿರುತ್ತದೆ. ಅಲ್ಲಿರುವವರೆಗೆ, ಅದು (ಜೀವಿಸುವ) ಪ್ರಾಣದ ಪ್ರಾಂತದಲ್ಲಿರುತ್ತದೆ. ಮೃತ್ಯುವಿನ ಕ್ಷಣದಲ್ಲಿ ದೇಹವನ್ನು ತೊರೆದು ಹೋಗುವ ಅದರ ಭಾಗದಿಂದ ಬೇರ್ಪಡೆ–ಯಾಗುವುದು ಸುಲಭವಾದದ್ದಲ್ಲ. ಇದಕ್ಕೆ ಬಹಳ ದೀರ್ಘ ಕಾಲದವರೆಗೆ ಆಚರಿಸಬೇಕಾದ ಕಟ್ಟುನಿಟ್ಟಿನ ಶಿಸ್ತುಪಾಲನೆ ಬೇಕಾಗುತ್ತದೆ. ಅನುಸರಿಸಬೇಕಾದ ಬಾಹ್ಯೀಕರಣಗೊಳಿಸುವ ವಿಧಾನವೊಂದಿದೆ, ಅದರಿಂದಾಗಿ ಮೃತ್ಯುವಿನ ಸಮಯದಲ್ಲಿ ದೇಹವನ್ನು ಬಿಟ್ಟು ಹೋಗುವ ಎಲ್ಲ ಭಾಗಗಳು ಹೊರಟು ಹೋಗುವಂತೆ ಮಾಡುವುದರಲ್ಲಿ ಯಶಸ್ಸು ಪಡೆಯಬಹುದು, ಮತ್ತು ಈ ಸಂದರ್ಭದಲ್ಲಿ ದೇಹ ಮೂರ್ಚ್ಛೆಯ ಸ್ಥಿತಿಯಲ್ಲಿ ಪ್ರವೇಶಿಸುತ್ತದೆ. ಮನುಷ್ಯ ಮೃತ್ಯು ಹೊಂದಿದಾಗ ಇರುವ ಸ್ಥಿತಿಯಲ್ಲಿ ದೇಹವಿರುವುದು ಕಂಡುಬರುತ್ತದೆ. ಅದು ಬಹಳ ತೀವ್ರಗತಿಯಿಂದ

ಸಂಪೂರ್ಣವಾಗಿ ಬಿರುಸಾದದ್ದು ಆಗಬಹುದು. ಸರಿ, ಇದು ಮನುಷ್ಯ ಕಲಿತುಕೊಳ್ಳಬೇಕಾದ ಏನೋ ಒಂದು, ಅದು ಅಷ್ಟು ಸುಲಭವಾಗಿರುವುದಿಲ್ಲ. ಮತ್ತು ಮನುಷ್ಯ ಅದನ್ನು ಬಹಳ ಪೂರ್ತಿಯಾಗಿ ಕೈಕೊಳ್ಳಬೇಕೆಂದು ಬಯಸಿದರೆ, ಆ ದೇಹದ ಮೇಲೆ ಗಮನವಿರಿಸಲು ಯಾರಾದರೊಬ್ಬರು ಅಲ್ಲಿರುವುದು ಅವಶ್ಯ–ವಾಗಿರುತ್ತದೆ, ಅದರಿಂದಾಗಿ ಬೇರೇನೂ ಸಂಭವಿಸದಂತಾಗುವುದು. ಮನುಷ್ಯ ಅದನ್ನು ಏಕಾಕಿಯಾಗಿ ಕೈಕೊಳ್ಳಲಾರ. ದೇಹವನ್ನು ರಕ್ಷಿಸಲು ಯಾರಾದರೊಬ್ಬರು ಅಲ್ಲಿ ಇರಲೇಬೇಕಾಗುತ್ತದೆ.

ಮನುಷ್ಯ ಅದೆಲ್ಲವನ್ನೂ ಕೈಕೊಂಡಾಗಲೂ ಕೂಡ ಆಗುವ ಆ ಅನುಭವವನ್ನಷ್ಟೇ ಕುರಿತು ನಾನು ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವುದು ಇನ್ನೂ ಹೆಚ್ಚು ಕಠಿಣವಾಗಿದೆ. ಒಮ್ಮೆ ಮನುಷ್ಯ ಆ ರೀತಿ ಹೊರಟು ಹೋದ ನಂತರ ಮತ್ತು ದೇಹವನ್ನು ಮೂರ್ಛೆಯ ಸ್ಥಿತಿಯಲ್ಲಿರಲು ಬಿಟ್ಟುಕೊಟ್ಟಾಗ ಅವನು ಕೊಂಡಿಗಳನ್ನು ಮುರಿದು ಹಾಕಿರುತ್ತಾನೆ, ಹಾಗಾಗಿ ಅವನು ಸಾವನ್ನಪ್ಪಿರುತ್ತಾನೆ, ಎಂದರೆ ಹೃದಯದ ಬಡಿತ ಇನ್ನು ಮುಂದೆ ಇರುವುದಿಲ್ಲ. ಆದರೆ ಇನ್ನೂ "ರೂಪದ ಪ್ರಾಣ" ಇರುವುದರಿಂದ ಮತ್ತು ಅಪಘಾತದ ಮೂಲಕ ಮರಣ ಹೊಂದಿರದೆ ಇರುವುದರಿಂದ ಹಾಗೂ ದೇಹದಿಂದ ಹೊರಗೆ ಹೊರಟು ಹೋಗುವ ಕಾರ್ಯವನ್ನು ಸಂಕಲ್ಪ ಹಾಗೂ ಜ್ಞಾನಗಳ ಮೂಲಕ ಕೈಕೊಂಡಿರುವುದರಿಂದ ಸಂಪರ್ಕವನ್ನು ಪುನಃ ಸ್ಥಾಪಿಸಬಲ್ಲನು, ಮರಳಿ ಜೀವಿಸುವುದಕ್ಕೆ ಅವನು ಶಕ್ತಿಯನ್ನು ಉಪಯೋಗಿಸಬಲ್ಲನು, ಅದು ಸುಖಕರ ವ್ಯವಹಾರವಲ್ಲ – ಇಡೀ ವಿಷಯ ಕಠಿಣವಾದದ್ದು. ಆ ರೀತಿಯಲ್ಲಿ ಅದನ್ನು ಹಾಳೆಯ ಮೇಲೆ ಬರೆದಾಗ, ಅದೇನಾದರೂ ಆಗಿದೆ ಎಂದು ತೋರಿಬರುವುದಿಲ್ಲ. ಆದರೆ ಅದು ಸುಲಭವಾದದ್ದಲ್ಲ.

**ಪ್ರಶ್ನೆ :** *"ಅದು ಅದೆಷ್ಟು ಕಡಿಮೆ ಜನರ ಅಳವಿನಲ್ಲಿದೆ" ಎಂದು ಇಲ್ಲಿ ಹೇಳಿದ್ದೀರಿ. ಹಾಗಾಗಿ ಅದನ್ನು ಕೈಕೊಂಡ ಜನರಿದ್ದಾರೆ ಎಂದು ಅರ್ಥಮಾಡಿಕೊಳ್ಳಬಹುದು. ಅವರು ಅಮರತ್ವವನ್ನು ಪಡೆದಿರುತ್ತಾರೆಯೆ?*

**ಶ್ರೀಮಾತೆ :** ಅಮರತ್ವವನ್ನು ಪಡೆದಿರುವುದಿಲ್ಲ. ಇದು ಅಮರತ್ವವಾಗಿತ್ತೆಂದು ನಾನು ಹೇಳಿಲ್ಲ. ಅವರು ಸಾವಿನ ಭಯದಿಂದ ಮುಕ್ತರಾಗಿದ್ದರು ಎಂದು ಹೇಳಿದ್ದೇನೆ. ಅದು ಬೇರೆ ವಿಷಯ.



**ಪ್ರಶ್ನೆ :** *ಆದರೆ ಅವರು ಮೃತ್ಯುವಿನ ಪ್ರಾಂತದಲ್ಲಿ ಪ್ರವೇಶಿಸಿರುತ್ತಾರಲ್ಲವೆ?*

**ಶ್ರೀಮಾತೆ :** ಹೌದು, ಆದರೆ ಆ ಕ್ಷಣದಲ್ಲಿ ದೇಹ ಒಳ್ಳೆಯ ಸ್ಥಿತಿಯಲ್ಲಿರುತ್ತದೆ. ದೇಹ ಸುಸ್ಥಿತಿಯಲ್ಲಿರುವುದರಿಂದ ಅದನ್ನು ಮತ್ತೆ ಕಂಡುಕೊಳ್ಳಬಹುದು – ಆ ರೀತಿಯಲ್ಲಿ ದೀರ್ಘಕಾಲದವರೆಗೆ ಹೊರಗೆ ಉಳಿದುಕೊಳ್ಳುವುದರ ಪ್ರಶ್ನೆ ಅದಾಗಿರುವುದಿಲ್ಲ.

**ಪ್ರಶ್ನೆ :** *ಅವರಿಗೆ ಆ ಅನುಭವ ಇರುವುದರಿಂದ, ನಿಜವಾಗಿ ಮೃತರಾದಾಗ ಅವರು ಆ ಕಾರ್ಯವನ್ನು ಕೈಕೊಳ್ಳಬಲ್ಲರೆ?*

**ಶ್ರೀಮಾತೆ :** ಅವರ ದೇಹ ಸುಸ್ಥಿತಿಯಲ್ಲಿದ್ದರೆ ಅದು ಸಾಧ್ಯವಾಗಬಹುದು. ಆದರೆ, ಸಾಮಾನ್ಯವಾಗಿ, ಮನುಷ್ಯ ಮೃತನಾದಾಗ ಅವನ ದೇಹಕ್ಕೆ ಏನೋ ಒಂದು ಸಂಭವಿಸಿರುತ್ತದೆ, ತಿಳಿಯಿತೆ? ದೇಹದಲ್ಲಿ ವ್ಯವಸ್ಥಿತ ಕ್ರಮ ತಪ್ಪಿಹೋದ ಏನೋ ಒಂದಿರುತ್ತದೆ. ಆದಾಗ್ಯೂ ದೇಹದಿಂದ ಹೊರಗೆ ಹೋದಾಗ ಅದರಲ್ಲಿ ಕ್ಷೋಭೆ ಉಂಟಾದರೆ ಅದನ್ನು ನಿವಾರಿಸುವ ಕ್ಷಮತೆಯನ್ನು ಮನುಷ್ಯ ಹೊಂದಿರುವದಿಲ್ಲ ಎಂಬುದು ನಿಶ್ಚಿತವಾಗಿರುವುದಿಲ್ಲ, ಆದರೆ ಅದು ಹೃದಯಕ್ಕೆ ಚೂರಿ ಹಾಕಿದಂತಹ ಇಲ್ಲವೆ ಶಿರಚ್ಛೇದವಾದಂತಹ ಕ್ಷೋಭೆ ಆಗಿರಬಾರದು. ಅದು ಸಾಕಷ್ಟು ಭೀಕರವಾದದ್ದು, ಆದಾಗ್ಯೂ ದೇಹ ಶಿಥಿಲವಾಗದೆ ಉಳಿದುಕೊಂಡಿದ್ದರೆ, ಅದರಲ್ಲಿ ಕೇವಲ ಅಸಮತೋಲನವಿದ್ದರೆ ಅದನ್ನು ನಿವಾರಿಸುವ ಕ್ಷಮತೆಯನ್ನು ಪುನಃ ಸ್ಥಾಪಿಸಬಹುದು.

**ಪ್ರಶ್ನೆ :** *ಶ್ರೀಮಾತೆಯವರೆ, ಕೊಂಡಿಗಳು ಮುರಿದು ಹೋದಾಗ ಏನಾಗುತ್ತದೆ?*

**ಶ್ರೀಮಾತೆ :** ಕೊಂಡಿಗಳು ಮುರಿದು ಹೋಗಿದ್ದರೆ ಮನುಷ್ಯ ಸಾವನ್ನಪ್ಪುತ್ತಾನೆ.

**ಪ್ರಶ್ನೆ :** *ಆದರೆ ದೇಹದಿಂದ ಹೊರಗೆ ಹೋದ ಭಾಗಕ್ಕೆ ಏನಾಗುತ್ತದೆ?*

**ಶ್ರೀಮಾತೆ :** ಅದು ಪ್ರಜ್ಞಾಪೂರ್ಣವಾಗಿದ್ದರೆ ಪರಿಪೂರ್ಣವಾಗಿ ಪ್ರಜ್ಞಾಪೂರ್ಣ–ವಾಗಿಯೇ ಉಳಿದುಕೊಳ್ಳುತ್ತದೆ. ಅದಕ್ಕೆ ಅದರದೇ ಸ್ವತಂತ್ರ ಜೀವನವಿರುತ್ತದೆ, ಅದು ಪರಿಪೂರ್ಣ ಪ್ರಜ್ಞೆಯೊಂದಿಗೆ ಉಳಿದುಕೊಳ್ಳುತ್ತದೆ. ದೇಹದಿಂದ ಕಡಿದು ಹೋಗಿರಲಿ ಇಲ್ಲವೆ ಕಡಿದು ಹೋಗದೇ ಇರಲಿ ಅದರಿಂದ ಅದರ ಜೀವನದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಆ ಜೀವನದಲ್ಲಿ ಅದಕ್ಕೆ ಹೆಚ್ಚಿನ ಪ್ರಜ್ಞೆ ದೊರಕುವುದಿಲ್ಲ, ಇದ್ದ ಪ್ರಜ್ಞೆ ಕಡಿಮೆಯಾಗುವುದಿಲ್ಲ, ಅದಕ್ಕಿದ್ದ ಪ್ರಜ್ಞೆ, ಜ್ಞಾನ ಮತ್ತು ಸಾಮರ್ಥ್ಯ ಇವುಗಳನ್ನು ಅದು ಕಾಪಾಡಿಕೊಂಡು ಹೋಗುತ್ತದೆ. ಎಂದರೆ

ಪ್ರಜ್ಞಾಪೂರ್ಣವಾಗುವುದಕ್ಕಾಗಿ ಮನುಷ್ಯ ದೇಹದ ಮೇಲೆ ಅವಲಂಬಿಸುವುದಿಲ್ಲ. ಅವನಿಗೆ ಒಟ್ಟಿನಲ್ಲಿ ಸ್ವತಂತ್ರವಾದ ಪ್ರಜ್ಞೆ ಇರುತ್ತದೆ.

**(CWM, 6/52–54)** **– ಶ್ರೀಮಾತೆ**

*

**ಮೃತ್ಯುವನಪ್ಪದೆ ಮೃತ್ಯುವನಪ್ಪುವುದು**

**ಪ್ರಶ್ನೆ :** *ಸ್ವಲ್ಪ ಸಮಯದ ಹಿಂದೆ ನಿಮ್ಮ ದೇಹ ಈ ಮೊದಲು ಸಂಭವಿಸಿದ್ದ ಮೃತ್ಯುವನ್ನು ನೆನಪಿಗೆ ತಂದುಕೊಂಡಿತೆಂದು ಹೇಳಿದಿರಿ....*

**ಶ್ರೀಮಾತೆ :** ಓಹ್, ಹೌದು.

**ಪ್ರಶ್ನೆ :** *ಆದರೆ ಆ ನೆನಪು ಏನಾಗಿತ್ತೆಂಬುದನ್ನು ನೀವು ಹೇಳಲಿಲ್ಲ.*

**ಶ್ರೀಮಾತೆ :** ಹೌದು. ಪ್ರತಿಯೊಬ್ಬರಿಗೂ ಅದು ತಿಳಿದಿದೆ. ನಾನು ತ್ಲೆಮ್‌ಸೆನ್ (Tlemcen)ದಲ್ಲಿ ಥಿಯೋನ್‌ನೊಂದಿಗೆ ಕಾರ್ಯ ಕೈಕೊಳ್ಳುತ್ತಿದ್ದಾಗ ಅದು ಸಂಭವಿಸಿತು. ಭೌತಿಕವಾಗಿ ಇಡಿಯಾದ ರೀತಿಯಲ್ಲಿ ದೇಹದಿಂದ ಹೊರಗೆ ಹೋಗಿದ್ದೆ, ದೇಹ ಮೂರ್ಛೆಯ ಸ್ಥಿತಿಯಲ್ಲಿತ್ತು, ಏನೋ ಒಂದು ಬಂದು ಕೊಂಡಿ ಮುರಿದು ಹೋಗುವಂತೆ ಮಾಡಿತು. ಹಾಗಾಗಿ ಕೊಂಡಿ ಮುರಿದು ಹೋಗಿತ್ತು.

**ಪ್ರಶ್ನೆ :** *ಆ ಸಮಯದಲ್ಲಿ ಅನುಭವ ಯಾವ ರೀತಿಯದಾಗಿತ್ತು?*

**ಶ್ರೀಮಾತೆ :** (ನಗುತ್ತ) ಆ ಅನುಭವ ದೇಹದಲ್ಲಿ ಮರಳಿ ಹೋಗುವುದು ಅಸಾಧ್ಯ ಎಂದೆನಿಸುವ ಹಾಗಿತ್ತು! ಆದರೆ ಥಿಯೋನ್ ಅಲ್ಲಿದ್ದ (ಥಿಯೋನ್‌ನಿಗೆ ಕೆಟ್ಟ ಹೆದರಿಕೆ ಉಂಟಾಯಿತು) ಮತ್ತು ಆ ಸಮಯದಲ್ಲಿ ರಹಸ್ಯವಾದ ಆ ವಿಷಯ ಕುರಿತು ಹೆಚ್ಚಿನ ಜ್ಞಾನವಿದ್ದಿತು. ಆ ಜ್ಞಾನ ಹಾಗೂ ದೇಹದಲ್ಲಿ ಮರು ಪ್ರವೇಶ ಮಾಡಬೇಕೆಂಬ ಸಂಕಲ್ಪಗಳಿದ್ದವು, ಆಂತರಿಕ ನಂಬಿಕೆಯಿತ್ತು, ಏಕಾಗ್ರತೆಯಿತ್ತು (ಅದನ್ನು ಕುರಿತು ನಾನು ಎಂದೂ ಹೇಳಿರಲಿಲ್ಲ). ಥಿಯೋನ್‌ನನ್ನು ಕುರಿತು ಹೇಳುವುದಾದರೆ ಅವನು ಸಮರ್ಥನಾಗಿದ್ದ, ಅವನಲ್ಲಿ ಜ್ಞಾನವಿತ್ತು. ಅವನು ದೇಹದಲ್ಲಿ ಎಳೆದು ತರಲು ಸಮರ್ಥನಾಗಿದ್ದ. ಮತ್ತು ದೇಹ ಕುಂದಿರಲಿಲ್ಲ, ಅದಕ್ಕೆ ಹಾನಿಯುಂಟಾಗಿರಲಿಲ್ಲ, ಹಾಗಾಗಿ ಎಳೆದು ತರುವುದು ಕಠಿಣವಾಗಲಿಲ್ಲ. ದೇಹ ಬಹಳ ಒಳ್ಳೆಯ ಸ್ಥಿತಿಯಲ್ಲಿತ್ತು, ಆದರೆ ಎಳೆ ಕತ್ತರಿಸಿಹೋಗಿತ್ತು, ಅದರರ್ಥ ದೇಹಕ್ಕೆ ಪ್ರಾಣವನ್ನು ನೀಡುವುದು ಹೊರಟು ಹೋಗಿತ್ತು, ಮರಳಿ ಬಾರದ ಸ್ಥಿತಿಯಲ್ಲಿತ್ತು.



ಸಾಮರ್ಥ್ಯ ಹಾಗೂ ಸಂಕಲ್ಪಗಳಿಂದಾಗಿ ನಾನು ಮರಳಿ ಬಂದೆ. ವಾಸ್ತವದಲ್ಲಿ ಸರಳ ರೀತಿಯಲ್ಲಿ ಹೇಳುವುದಾದರೆ, ಪೃಥ್ವಿಯ ಮೇಲೆ ನಾನು ಕೈಕೊಳ್ಳಬೇಕಾದ ಏನೋ ಒಂದಿಷ್ಟಿತ್ತು.

ಅದು 1910 ರಲ್ಲಿ ಸಂಭವಿಸಿತೆಂದು ನನಗನಿಸುತ್ತದೆ.

**(ಅನುಯಾಯಿಯೊಂದಿಗೆ ಮಾತುಕತೆ, 14–6–1967)** **– ಶ್ರೀಮಾತೆ**

*

**ಮೃತ್ಯುವಿನ ಮುನ್ನಡೆಯಲ್ಲಿರುವ ಹಂತಗಳು**

**ಪ್ರಶ್ನೆ :** *ಹಾಗಾಗಿ ಆತ್ಮ ದೇಹವನ್ನು ತ್ಯಜಿಸಿ ಹೋಗುತ್ತದೆಂಬ ಕಾರಣದಿಂದ ಮೃತ್ಯು ಬರುವುದಿಲ್ಲ, ಅಲ್ಲವೆ?*

**ಶ್ರೀಮಾತೆ :** ದೇಹ ಜೀವಿಸಲು ಅನರ್ಹವಾಗಿದೆ, ಯೋಗ್ಯವಾಗಿಲ್ಲ, ಅಸಮರ್ಥ–ವಾಗಿದೆ, ಜೀವಿಸುವ ಇಚ್ಛೆ ಅದಕ್ಕಿಲ್ಲ ಎಂಬ ಕಾರಣದಿಂದ ಆತ್ಮ ನಿರ್ಧಾರ ಮಾಡಬಹುದು. – ಅಂತಹದೇನೇ ಇರಲಿ, ದೇಹ ಮೃತ್ಯು ಹೊಂದಲಿ ಎಂದು ಆತ್ಮ ನಿರ್ಧಾರ ಕೈಕೊಳ್ಳಬಹುದು, ಆದರೆ ದೇಹವು ಮೃತವಾಗುವುದು ಆತ್ಮ ಹೊರಟು ಹೋಗಿದೆ ಎಂಬ ಕಾರಣದಿಂದಲ್ಲ. ಆತ್ಮರಹಿತವಾದ ಅನೇಕ ಜನರಿದ್ದಾರೆ, ಅವರಿಗೆ ಆತ್ಮವಿದೆ, ಆದರೆ ಆ ಆತ್ಮ ದೇಹದಲ್ಲಿ ಇರುವುದಿಲ್ಲ – ಅಂತಹ ಹಲವಾರು ಜನರಿದ್ದಾರೆ. ಮತ್ತು ಅವರು ಚೆನ್ನಾಗಿ ಜೀವಿಸುತ್ತ ಹೋಗುತ್ತಾರೆ.

ಇನ್ನೊಂದೆಡೆಗೆ ಚೈತ್ಯಸತ್ತೆಯಿಲ್ಲದೆ ಜೀವಿಸುವುದು ಹೆಚ್ಚು ಕಠಿಣವಾದದ್ದು. ಸಹಜವಾಗಿ ಚೈತ್ಯಸತ್ತೆ ವ್ಯಕ್ತಿವಿಶಿಷ್ಟತೆಯ ಹೊದಿಕೆ – ಆ ಹೊದಿಕೆ ಸನಾತನ ಆತ್ಮ ಮತ್ತು ಸಂಕ್ರಮಣಕ್ಕೊಳಗಾಗುವ ದೇಹ (ಜೀವನದಿಂದ ಜೀವನಕ್ಕೆ) ಇವುಗಳ ನಡುವೆ ಇರುತ್ತದೆ. ಅದು ಹೆಚ್ಚು ರೂಪುಗೊಂಡು ಬೆಳೆಯುತ್ತದೆ, ವ್ಯಕ್ತಿವಿಶಿಷ್ಟತೆ ಪಡೆಯುತ್ತದೆ, ವ್ಯಕ್ತಿಗತವಾಗಿ ಹೆಚ್ಚು ಹೆಚ್ಚಾಗಿ ಪ್ರಜ್ಞಾಪೂರ್ಣವಾಗುತ್ತದೆ. ಅದು ದೇಹವನ್ನು ತ್ಯಜಿಸಿದಾಗ ಉಳಿದೆಲ್ಲವೂ ಸಾಮಾನ್ಯವಾಗಿ ಅದನ್ನು ಅನುಸರಿಸುತ್ತದೆ. ನಾನು ಅದನ್ನು (ದೇಹ ತ್ಯಜಿಸುವುದನ್ನು) ಬುದ್ಧಿಪೂರ್ವಕವಾಗಿ ಕೈಕೊಂಡಿದ್ದೆ, ಹಾಗಾಗಿ ಅದು ನನಗೆ ತಿಳಿದಿದೆ. ಅದನ್ನು ಹೇಗೆ ಕೈಕೊಳ್ಳಬೇಕೆಂಬುದನ್ನು ಮನುಷ್ಯ ತಿಳಿದುಕೊಳ್ಳಬೇಕು, ಆದರೆ ಅದನ್ನು ಕೈಕೊಳ್ಳಬಹುದು. ನನ್ನ ಚೈತ್ಯಸತ್ತೆ ಇಲ್ಲಿ ಶ್ರೀ ಅರವಿಂದರೊಂದಿಗೆ ಉಳಿದುಕೊಂಡಿತ್ತು. ನನ್ನ ಮಾನಸಿಕ, ಪ್ರಾಣಿಕ ಹಾಗೂ

ಭೌತಿಕ ಸತ್ತೆಗಳೊಂದಿಗೆ ಹೊರಟು ಹೋಗಿದ್ದೆ. ಅದು ಸ್ವಲ್ಪ ಅಪಾಯಕಾರಿ ಸ್ಥಿತಿ. ಆದರೆ ನಾನು ಸಂಪರ್ಕವನ್ನು ಪ್ರಜ್ಞಾಪೂರ್ವಕವಾಗಿ ಕಾಪಾಡಿಕೊಂಡು ಬಂದದ್ದರಿಂದ, ಅದನ್ನು ಕೈಕೊಳ್ಳಬಹುದಾಗಿತ್ತು.

'ಮೃತ್ಯು' ಎಂದು ಜನರು ಯಾವುದನ್ನು ಕುರಿತು ಹೇಳುತ್ತಾರೆ? ಜೀವಂತವಿದ್ದೂ ಮೃತರಾದವರ ಹಾಗಿರುವ (ಚೈತ್ಯಸತ್ತೆ ಇಲ್ಲದ ಜನರು, ಇಲ್ಲವೆ ಆತ್ಮದೊಂದಿಗೆ ಸಂಪರ್ಕ ಬೆಳೆಸಿಕೊಂಡಿರದ ಜನರು) ಅನೇಕ ಜನರನ್ನು ನಾನು ನೋಡಿದ್ದೇನೆ. ಆದರೆ ಅದನ್ನು ತಿಳಿದುಕೊಳ್ಳಲು ಮನುಷ್ಯನಲ್ಲಿ ಆಂತರಿಕ ದೃಷ್ಟಿ ಇರಬೇಕು. ಜೀವಕೋಶಗಳ ವಿಘಟನೆ, ರೂಪ ಕರಗಿ ಹೋಗುವಿಕೆ ಇದೆಲ್ಲ ಇರುವುದನ್ನು ಜನರು ಮೃತ್ಯು ಎಂದು ಕರೆಯುತ್ತಾರೆ, ಆಗ ಪ್ರಾಣದೊಂದಿಗೆ ಎಂದರೆ ಪ್ರಾಣಿಕ ಶಕ್ತಿಯೊಂದಿಗೆ ಸಂಪರ್ಕ ಉಂಟುಮಾಡುವ ಅತ್ಯಂತ ಭೌತಿಕವಾದ "ಪ್ರಾಣಿಕ ಉಪಹಂತ" (Vital Sub-degree) ಹೊರಟು ಹೋಗಿರುತ್ತದೆ: ಉದಾಹರಣೆಗೆ ಪಶುಗಳ ಮರಣ ಆ ರೀತಿಯದಾಗಿರುತ್ತದೆ. ಮತ್ತು ಬಾಹ್ಯ ಭೌತ–ದೇಹ (organism) ಮುಂದುವರಿದುಕೊಂಡು ಹೋಗಲು ಶಕ್ತವಾಗದೆ ಇದ್ದಾಗ, ಸರ್ವ ಸಾಧಾರಣವಾಗಿ ಆ ಪ್ರಾಣಿಕ ಉಪ ಹಂತ ಹೊರಟು ಹೋಗುತ್ತದೆ – ಉದಾಹರಣೆಗೆ ಭೌತ ದೇಹವನ್ನು ಎರಡು ತುಂಡು ಮಾಡಿದಾಗ, ಹೃದಯದ ಭಾಗವನ್ನು ಕಿತ್ತು ತೆಗೆದಾಗ, ಇಲ್ಲವೆ ಯಾವುದೇ ರೀತಿಯಲ್ಲಿ ಮೂಲಭೂತವಾದ ಏನೋ ಒಂದು ಸಂಭವಿಸಿದಾಗ ಪ್ರಾಣಿಕ ಉಪ ಹಂತ ಹೊರಟು ಹೋಗುತ್ತದೆ. ಅಪಘಾತಕ್ಕೀಡಾದ ಕೆಲವು ಜನರು ದೇಹದ ಕೆಲವು ಭಾಗಗಳನ್ನು ಕಳೆದುಕೊಂಡಿದ್ದರೂ ಜೀವಿಸಿದ್ದರು. ಹೃದಯ ಸ್ತಂಭನ (Cardiac attack) ಕೂಡ ಮೃತ್ಯು ಎಂದು ಅವಶ್ಯವಾಗಿ ಹೇಳಲಾಗದು, ಏಕೆಂದರೆ ಹೃದಯ ಬಡಿತ ನಿಂತುಹೋದ ನಂತರದ ಕೆಲವು ಸೆಕೆಂಡುಗಳು ಇಲ್ಲವೆ ನಿಮಿಷಗಳು ಕಳೆದ ಮೇಲೆ ಬಡಿತ ಮತ್ತೆ ಪ್ರಾರಂಭವಾಗಬಹುದು. ಇದನ್ನು ಕುರಿತು ಪ್ರಾಪಂಚಿಕ ಜ್ಞಾನವುಳ್ಳವರು ಹೇಳುವುದೇನೆಂದರೆ ಹೃದಯ ಕೆಲ ನಿಮಿಷಗಳ ನಂತರ ಬಡಿದುಕೊಳ್ಳುವುದನ್ನು ಪ್ರಾರಂಭಿಸಬಹುದು, ಅದರ ನಂತರ ವಿಘಟನೆ ಪ್ರಾರಂಭವಾಗುತ್ತದೆ. ವಿಘಟನೆಯೊಂದಿಗೆ, ಸ್ವಾಭಾವಿಕವಾಗಿ, ಅದು ಮುಗಿದು ಹೋಗಿರುತ್ತದೆ.



ಹಾಗಾಗಿ ಮೃತ್ಯುವಿನಲ್ಲಿ ಹಂತಗಳಿವೆ ಎಂದು ನಾವು ಸರಿಯಾಗಿ ಹೇಳಬಹುದು. ಜೀವಿತ ಕಾಲದಲ್ಲಿ ಹಂತಗಳಿವೆ, ಮೃತ್ಯುವಿನಲ್ಲಿ ಹಂತಗಳಿವೆ: ಕೆಲವು ಸತ್ತೆಗಳು ಹೆಚ್ಚಿನ ಅಥವಾ ಕಡಿಮೆ ದರ್ಜೆಯಲ್ಲಿ ಜೀವಿಸುತ್ತಾರೆ, ಇದನ್ನೇ ಋಣಾತ್ಮಕವಾಗಿ ಹೇಳುವುದಾದರೆ ಕೆಲವು ಸತ್ತೆಗಳು ಹೆಚ್ಚಿನ ಇಲ್ಲವೆ ಕಡಿಮೆ ದರ್ಜೆಯಲ್ಲಿ ಮರಣ ಹೊಂದಿರುತ್ತಾರೆ. ಈ ಭೌತಿಕ ರೂಪ ಅತಿಮಾನಸ ಪ್ರಕಾಶವನ್ನು ಪ್ರಕಟಿಸಬಹುದೆಂದು ತಿಳಿದವರಿದ್ದಾರೆ. ಅತಿಮಾನಸ ಪ್ರಕಾಶವನ್ನು ತಮ್ಮಲ್ಲಿ ಹೊಂದಿರದೆ ಇದ್ದ ಜನರು ಅದಾಗಲೆ ಅರ್ಧ ಮರಣ ಹೊಂದಿರುತ್ತಾರೆ. ಅದಿರುವುದು ಹಾಗೆ. ಹಾಗಾಗಿ ಹಂತಗಳಿವೆ. ಸಂಪ್ರದಾಯದಲ್ಲಿ ಜನರು 'ಮೃತ್ಯು' ಎಂದು ಕರೆದದ್ದು ಕೇವಲ ಬಾಹ್ಯ ಗೋಚರ ಸಂಗತಿ, ಏಕೆಂದರೆ ಅದು ನಿರಾಕರಿಸಲಾಗದ ಏನೋ ಒಂದು – ದೇಹ ಚೂರು ಚೂರಾಗಿ ಹೋಗುವುದಾಗಿದೆ.

**(ಅನುಯಾಯಿಯೊಂದಿಗೆ ಮಾತುಕತೆ, ಜೂನ 14, 1967)** **– ಶ್ರೀಮಾತೆ**

*

**ಜೀವನ ಹಾಗೂ ಮರಣಗಳ ನಡುವೆ ಅಷ್ಟೊಂದು ವ್ಯತ್ಯಾಸವಿಲ್ಲ**

ಜನರು ಯಾವುದನ್ನು ಜೀವನ ಹಾಗೂ ಯಾವುದನ್ನು ಮರಣ ಎಂದು ಕರೆಯುತ್ತಾರೋ ಅವುಗಳ ನಡುವೆ ಬಹಳ ದೊಡ್ಡ ವ್ಯತ್ಯಾಸವಿಲ್ಲ. ಇರುವ ವ್ಯತ್ಯಾಸ ಬಹಳ ಕಡಿಮೆ, ಮತ್ತು ಆ ಸಮಸ್ಯೆಯ ಆಳದಲ್ಲಿಳಿದು, ವಿವರಗಳನ್ನು ಗಮನಿಸಿ ನೋಡಿದಾಗ ಆ ವ್ಯತ್ಯಾಸ ಇನ್ನೂ ಕಡಿಮೆಯಾಗುತ್ತದೆ. ಜನರು ಅವೆರಡರ ನಡುವೆ ಸ್ಪಷ್ಟವಾಗಿ ಕೊರೆದು ತೆಗೆಯುತ್ತಾರೆ – ಅದು ಹೆಡ್ಡತನದ್ದು: ಜೀವಿಸುವ ಕೆಲವರು ಅದಾಗಲೆ ಅರ್ಧ ಮೃತರಾಗಿದ್ದಾರೆ ಮತ್ತು ಮೃತರಾದವರಲ್ಲಿ ಅನೇಕ ಜನರು ಜೀವಂತವಿದ್ದಾರೆ.

**(ಅನುಯಾಯಿಯೊಂದಿಗೆ ಮಾತುಕತೆ, 14–6–1967)** **– ಶ್ರೀಮಾತೆ**

*

ಮರಣ ಕುರಿತು ಮನುಷ್ಯ ಏನನ್ನೂ ತಿಳಿದಿಲ್ಲ – ಅದೇನಿದೆ ಎಂಬುದು ಅವನಿಗೆ ತಿಳಿದಿಲ್ಲ, ಏನು ಸಂಭವಿಸುತ್ತದೆ ಎಂಬುದು ಅವನಿಗೆ ತಿಳಿದಿಲ್ಲ, ಅವನು ಎಲ್ಲ ಬಗೆಯ ಆಧಾರ ಕಲ್ಪನೆಗಳನ್ನು (hypotheses) ನಿರ್ಮಾಣ ಮಾಡಿದ್ದಾನೆ, ಆದರೆ ನಿಶ್ಚಿತವಾದದ್ದು ಅಲ್ಲಿ ಏನೂ ಇಲ್ಲ. ಮತ್ತು ಮುಂದೆಳೆದುಕೊಂಡು

ಹೋಗುತ್ತ, ಈ ರೀತಿಯಲ್ಲಿ ಮುಂದೆಳೆದುಕೊಂಡು ಹೋಗುವುದಕ್ಕೆ ಒತ್ತು ನೀಡುತ್ತ ನಿಜವಾಗಿ ಮರಣ ಎಂದು ಕರೆಯಬಹುದಾದುದು ಏನೂ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇನೆ.

ಅಲ್ಲಿ ಕೇವಲ ತೋರಿಕೆ ಇದೆ, ಸೀಮಿತ ದೃಷ್ಟಿಕೋನದ ಆಧಾರದ ಮೇಲಿನ ಒಂದು ತೋರಿಕೆ. ಆದರೆ ಪ್ರಜ್ಞೆಯ ಕಂಪನದ ಮೇಲೆ ಯಾವ ಮೂಲಭೂತ ಬದಲಾವಣೆ ಇಲ್ಲ.

**(CWM, 11/61)** **– ಶ್ರೀಮಾತೆ**

*

ಅದು ಜೀವನ ಹಾಗೂ ಮರಣ ಇವುಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂದು ನಿಮಗೆ ಭಾವನೆ ಬರುವಂತೆ ಮಾಡುವ ಪ್ರಯತ್ನವಾಗಿದೆ. ... ಅದು ಜೀವನ ಇಲ್ಲವೆ ಮರಣ ಇವುಗಳಿಗಿಂತ ಬೇರೆಯಾದ ಏನೋ ಒಂದು. – ನಾವು ಜೀವನ ಎಂದು ಕರೆಯುವುದಲ್ಲ, ಇಲ್ಲವೆ ಮರಣ ಎಂದು ಕರೆಯುವುದಲ್ಲ. – ಅದು ಏನೋ ಒಂದು. ಮತ್ತು ಅದು ಭಗವಂತ.

ಇಲ್ಲವೆ ಅದಕ್ಕೂ ಹೆಚ್ಚಾಗಿ ಅದು ಭಗವಂತನತ್ತ ನಮ್ಮ ಮುಂದಿನ ಹೆಜ್ಜೆ.

**(ಅನುಯಾಯಿಯೊಂದಿಗೆ ಮಾತುಕತೆ, 9–12–1972)** **– ಶ್ರೀಮಾತೆ**

*

## ಮರಣದ ನಂತರ ಶ್ರೀ ಅರವಿಂದರ ರಕ್ಷಣೆ

ಇಂದು ಮುಂಜಾನೆ ಮೃತ್ಯುಂಜಯನ ಹಿರಿಯ ಸೋದರಿ ನಿಧನಳಾದದ್ದನ್ನು ಶ್ರೀಮಾತೆಯವರಿಗೆ ಹೇಳಿದೆ. ಶ್ರೀಮಾತೆಯವರು "ಹೌದು, ದೀರ್ಘ ಕಾಲದಿಂದ ಅವಳ ಆರೋಗ್ಯ ಸರಿಯಾಗಿರಲಿಲ್ಲ, ಅವಳು ಅಸ್ವಸ್ಥಳಾಗಿದ್ದಳು" ಎಂದು ಹೇಳಿದರು.

ಬಾಲ್ಕನಿ ದರ್ಶನದ ನಂತರ ಶ್ರೀಮಾತೆಯವರು ಬೆಳಗಿನ ಉಪಹಾರ ಸ್ವೀಕರಿಸುತ್ತಿದ್ದಾಗ ತಮಗೆ ಒಂದು ಸ್ವಾರಸ್ಯಕರ ವಿಷಯ ತಿಳಿದು ಬಂದಿದೆ ಎಂದು ಹೇಳಿದರು. ಮೃತ್ಯುಂಜಯನ ಸಹೋದರಿಯ ಹಣೆಯ ಮೇಲೆ ಅವರು ಶ್ರೀ ಅರವಿಂದರ ಸಂಕೇತವನ್ನು ನೋಡಿದ್ದರು. ಶ್ರೀಮಾತೆಯವರಿಗೆ ಬಹಳ ಆಶ್ಚರ್ಯವಾಯಿತು, ಅವರು "ಇದೇನು? ಹಣೆಯ ಮೇಲೆ ಏನಿದೆ?" ಎಂದು



ತಮಗೆ ತಾವೇ ಹೇಳಿಕೊಂಡರು. ಆಗ ಶ್ರೀ ಅರವಿಂದರು ಹೇಳುತ್ತಿದ್ದುದನ್ನು ಕೇಳಿಸಿಕೊಂಡರು: "ಇನ್ನು ಮುಂದೆ ಇಲ್ಲಿ ಮರಣ ಹೊಂದಿದವರ ಮೇಲೆ ನನ್ನ ಮುದ್ರೆಯನ್ನು ಇರಿಸುವೆ, ಅವನ ಸ್ಥಿತಿ ಏನೇ ಆಗಿರಲಿ, ಅವನಿಗೆ ರಕ್ಷಣೆ ನೀಡಲಾಗುವುದು." ಆಗ 6.30 A.M. ಆಗಿತ್ತು.

ವಾರಣಾಸಿ (ಕಾಶಿ) ಮರಣ ಹೊಂದುವುದಕ್ಕೆ ಆದರ್ಶ ಸ್ಥಳ ಎಂಬುದನ್ನು ನಾನು ಕೇಳಿದ್ದೆ. ಆದರೆ ಈಗ ಶ್ರೀ ಅರವಿಂದರು ಇನ್ನೂ ಹೆಚ್ಚು ಒಳ್ಳೆಯ ಹಾಗೂ ಸುರಕ್ಷಿತ ಸ್ಥಳವನ್ನು ಸೃಷ್ಟಿಸಿದ್ದಾರೆ.

**(Champaklal speaks, p. 234, 17.5.1959)**

*

ಹೃದಯದ ಒಂದು ನೂರಾ ಒಂದು ನರಗಳಿವೆ, ಇವೆಲ್ಲವುಗಳಲ್ಲಿ ಒಂದು ನರ ಮನುಷ್ಯನ ಶಿರದೊಳಗಿಂದ ಹೊರಬರುತ್ತದೆ; ಈ ನರದ ಮೂಲಕ ಆತ್ಮ ತನ್ನ ಅಮರ ನಿವಾಸದತ್ತ ಏರಿ ಹೋಗುತ್ತದೆ, ಆದರೆ ಉಳಿದೆಲ್ಲ ನರಗಳು ಅವನ ಸಾಗಿ ಹೋಗುವಿಕೆಯಲ್ಲಿ ಅವನನ್ನು ಎಲ್ಲ ಬಗೆಯಾದವುಗಳಲ್ಲಿ, ಜನ್ಮಗಳ ಎಲ್ಲ ಸ್ಥಿತಿಗಳಲ್ಲಿ ಕರೆದೊಯ್ಯುತ್ತವೆ.

(ಕಠ ಉಪನಿಷತ್)


*

ಹೃದಯದಲ್ಲಿ ದಿವ್ಯಾತ್ಮ ವಾಸಿಸುತ್ತಾನೆ ಮತ್ತು ಹೃದಯದಲ್ಲಿ ಒಂದು ನೂರಾ ಒಂದು ನರಗಳಿವೆ ಮತ್ತು ಪ್ರತಿಯೊಂದು ನರಕ್ಕೆ ಅದರ ನೂರು ಶಾಖೆಗಳಿವೆ ಮತ್ತು ಪ್ರತಿಯೊಂದು ಶಾಖೆಯಲ್ಲಿರುವ ನರ ಎಪ್ಪತ್ತೆರಡು ಸಾವಿರ ಉಪ ಶಾಖೆಯ ನರಗಳನ್ನು ಹೊಂದಿರುತ್ತವೆ, ಇವುಗಳ ಮೂಲಕ ಉಸಿರನ್ನು ವ್ಯಾಪಿಸಿಕೊಳ್ಳುವವನು ಚಲಿಸುತ್ತಾನೆ.

(ಪ್ರಶ್ನ ಉಪನಿಷತ್)

**(CWSA, 18/126, 183)** **– ಶ್ರೀ ಅರವಿಂದರು**

*



*

ಮರ್ತ್ಯಸ್ಥಿತಿ (mortality) ಎಂಬುದಿಲ್ಲ. ಅಮರನಾದವನು ಮಾತ್ರ ಮರಣ ಹೊಂದಬಲ್ಲ, ಮರ್ತ್ಯನಾದವನು ಜನಿಸಲಾರ ಇಲ್ಲವೆ ನಾಶವಾಗಲಾರ.

**(ಯೋಚನೆಗಳು ಹಾಗೂ ಸೂಕ್ತಿಗಳು) – ಶ್ರೀ ಅರವಿಂದರು**

*

ಅಮರನಾದವನು ಜೀವಿಸುವ ಸ್ಥಿತಿಯಿಂದ ಮರಣದ ಸ್ಥಿತಿಗೆ ಸಾಗಿ ಹೋಗಬಲ್ಲ (ಆದರೆ 'ಮರಣ' ನಾವು ತಿಳಿದುಕೊಂಡ ರೀತಿಯದಲ್ಲ) 'ಮರಣ ಹೊಂದಬಲ್ಲ' ಎಂದರೆ 'ಸ್ಥಿತಿಯನ್ನು ಬದಲಾಯಿಸಬಲ್ಲ'. ಅಮರನಾದವನು ಈ ಸ್ಥಿತಿಯಿಂದ ಆ ಸ್ಥಿತಿಗೆ, ಮತ್ತೆ ಹಿಂದೆ ಹಾಗೂ ಮುಂದೆ ಸಾಗಿ ಹೋಗಬಲ್ಲ. ನಾವು ಅದನ್ನು 'ಮರಣ' ಎಂದು ಕರೆಯುತ್ತೇವೆ, ಆದರೆ ಅದಕ್ಕೆ ಜೀವನದಿಂದ ಇಲ್ಲವೆ ಮರಣದಿಂದ ಆಗಬೇಕಾದುದೇನೂ ಇರುವುದಿಲ್ಲ. ಅವು ಸ್ಥಿತಿಯ ಬದಲಾವಣೆ–ಗಳಾಗಿರುತ್ತವೆ.

**(CWM, 10/96) – ಶ್ರೀಮಾತೆ**

*





ಬುದ್ಧನ ಬೋಧನೆಯಲ್ಲಿ ಪ್ರತಿಯೊಬ್ಬನಿಗೂ ಮರಣ ಬರಲೇಬೇಕೆಂದು ಹೇಳಲಾಗಿದೆ. ಆದರೆ ಮರಣವನ್ನು ಜಯಿಸಬಹುದು ಎಂಬುದನ್ನು ಬುದ್ಧ ಅರಿತಿದ್ದ. ಕೇವಲ ಆ ಸಮಯದಲ್ಲಿ ಜಗತ್ತು ಈ ಸತ್ಯವನ್ನು ಅರಿತುಕೊಳ್ಳಲು ತಯಾರಾಗಿರಲಿಲ್ಲ.

ಮರಣದ ಮೇಲೆ ನಿಜವಾಗಿ ಜಯ ಸಾಧಿಸಬಹುದು ಮತ್ತು ದೇಹವನ್ನು ಅಮರವಾದದ್ದನ್ನಾಗಿ ಮಾಡಬಹುದು ಎಂದು ಶ್ರೀ ಅರವಿಂದರು ಹೇಳಿದ್ದಾರೆ. ಆದರೆ, ಸಹಜವಾಗಿ, ಅದನ್ನು ಪ್ರತಿಯೊಬ್ಬನಲ್ಲಿ ಕೈಕೊಳ್ಳಲಾಗುವುದಿಲ್ಲ. ಮರಣ ಹೊಂದುತ್ತಿರುವಾಗ ಜನರು ಯಾವಾಗಲೂ ಭಗವಂತನನ್ನು ಸ್ಮರಿಸಬೇಕು. ಮತ್ತು ದೈವೀ ಸತ್ಯಕ್ಕಾಗಿ ಅಭೀಪ್ಸೆಪಡಬೇಕು. ಹೀಗೆ ಸುಲಭವಾಗಿ ಹಾಗೂ ಶಾಂತ ರೀತಿಯಿಂದ ಅವರು ಸಾಗಿ ಹೋಗಬಲ್ಲರು ಮತ್ತು ದೈವೀ ಸತ್ಯದತ್ತ ಹೊಸ ಪ್ರಯಾಣವನ್ನು ಪ್ರಾರಂಭಿಸಬಲ್ಲರು.

*

ಜನರು ಎಂದಿಗೂ ತಮ್ಮನ್ನು ಕುರಿತು ಯೋಚಿಸಬಾರದು, ತದ್ವಿರುದ್ಧವಾಗಿ ಅವರು ತಮ್ಮ ಯೋಚನೆಯನ್ನು ಭಗವಂತನ ಮೇಲೆ ಇರಿಸಬೇಕು ಮತ್ತು ಎಲ್ಲ ತೊಂದರೆಗಳು ಹೊರಟು ಹೋಗುವವು. ಅವರು ತಮ್ಮನ್ನು ಭಗವಂತನ ತೋಳುಗಳ ಮಧ್ಯೆ ಇರಿಸಬೇಕು, ಏಕೆಂದರೆ ಅವನ ತೋಳುಗಳು, ಯಾವಾಗಲೂ,

ತನ್ನ ಮಕ್ಕಳನ್ನು ಹಿಡಿದುಕೊಳ್ಳಲು ತಯಾರಾಗಿರುತ್ತವೆ. ಭಗವಂತನಲ್ಲಿ ಆಶ್ರಯಪಡೆದರೆ ಎಲ್ಲ ತೊಂದರೆಗಳು ಹೊರಟು ಹೋಗುವವು.

**(Champaklal speaks, p. 234, 17.5.1959) – ಶ್ರೀಮಾತೆ**

*

## ಮೃತ್ಯುವನ್ನು ಜಯಿಸುವುದು

### ಮೃತ್ಯುವಿನೊಂದಿಗೆ ಮರಣ ಹೊಂದುವುದು

ಅಂತಿಮವಾಗಿ ಸರ್ವಸಾಮರ್ಥ್ಯ ಮಾತ್ರ ಜಗತ್ತನ್ನು ಪರಿವರ್ತಿಸಬಹುದು, ಜಗತ್ತಿಗೆ ಮನವರಿಕೆ ಮಾಡಿಕೊಡಬಹುದು. ಪರಮೋಚ್ಚ ಪ್ರೇಮವನ್ನು ಅನುಭವಕ್ಕೆ ತಂದುಕೊಳ್ಳಲು ಜಗತ್ತು ತಯಾರಾಗಿಲ್ಲ. ಪರಮೋಚ್ಚ ಪ್ರೇಮ ಮಾತ್ರ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಲ್ಲದು. ಅದು ಸೃಷ್ಟಿಯ ಸಮಸ್ಯೆಯನ್ನೂ ಕೂಡ ನಿವಾರಿಸಬಲ್ಲದು, ಅಲ್ಲಿ ಇನ್ನು ಮುಂದೆ ಸಮಸ್ಯೆಗಳಿರುವುದಿಲ್ಲ. ಎಪ್ರಿಲ್ 13, 1962 ರ ಅನುಭವದ ನಂತರ ನನಗೆ ಅದು ತಿಳಿದಿದೆ. ಆದರೆ ಜಗತ್ತು ಇನ್ನೂ ತಯಾರಾಗಿಲ್ಲ, ಅದಕ್ಕೆ ಸಾವಿರಾರು ವರ್ಷಗಳ ಕಾಲ ಬೇಕಾಗಬಹುದು. ಆದಾಗ್ಯೂ ಅದು ಪರಮೋಚ್ಚ ಸಾಮರ್ಥ್ಯದ ಪ್ರಕಟಣೆಗಾಗಿ ತಯಾರಿ ಮಾಡಿಕೊಳ್ಳುವುದನ್ನು ಪ್ರಾರಂಭಿಸಿದೆ (ಅದು ಈ ಸಾಮರ್ಥ್ಯ ಮೊದಲು ಪ್ರಕಟವಾಗುತ್ತದೆ ಎಂಬುದನ್ನು ಸೂಚಿಸುತ್ತಿರುವಂತೆ ತೋರಿಬರುತ್ತದೆ.) ಮತ್ತು ಈ ಪರಮೋಚ್ಚ ದೈವೀ ಸಾಮರ್ಥ್ಯ ಸತತ ಗುರುತಿಸಿಕೊಳ್ಳುವಿಕೆಯ ಪರಿಣಾಮ ಸ್ವರೂಪದ್ದಾಗಬಹುದು.

ನಾವು ಕೆಲವು ಸದಭಿರುಚಿಯ ಸಂಗತಿಗಳನ್ನು ಹೇಳಬಹುದು, ಆದರೆ ಅವು ಏನನ್ನೂ ವಿವರಿಸಿ ಹೇಳುವುದಿಲ್ಲ. ಉದಾಹರಣೆಗೆ ಮನುಷ್ಯ ಅಮರತ್ವಕ್ಕಾಗಿ ಜನಿಸಲು ಮೃತ್ಯುವಿನೊಂದಿಗೆ ಮೃತ್ಯು ಹೊಂದಬೇಕು ಎಂದು ಹೇಳುವುದರಿಂದ ಉಂಟಾಗುವ ಭಾವನೆ. ಅದಕ್ಕೆ ಅರ್ಥವೇನೂ ಇಲ್ಲ, ಆದರೆ ಅದು ಏನೋ ಒಂದಕ್ಕೆ ಅನುಗುಣವಾಗಿದೆ. ಮೃತ್ಯುವಿನೊಂದಿಗೆ ಮೃತ್ಯು ಹೊಂದುವುದು, ಮೃತವಾಗಲು ಅಸಮರ್ಥವಾಗುವುದು, ಏಕೆಂದರೆ ಮೃತ್ಯುವಿಗೆ ಇನ್ನು ಮುಂದೆ ನೈಜತೆ ಇರುವುದಿಲ್ಲ. ಇದು ಸ್ಫಟಿಕೀಕರಣಗೊಳ್ಳುವಿಕೆ ಎಂದು ನಾನು ಹೇಳಲಾರೆ, ಅದು ಬಹಳ ಕಠಿಣವಾದದ್ದು, ಮೃದುವಾದ ಸುಳಿಗಾಳಿ ಘನೀಕರಣಗೊಳ್ಳುವಂತಹ ವಿಷಯ.

ಸಾಮಾನ್ಯ ಪ್ರಜ್ಞೆಯಲ್ಲಿ, ಅನುಭವದ ದಾರಿಯಲ್ಲಿ ಅಡ್ಡಬರುವುದು ಏನೆಂದರೆ



ನಾವು ನೋಡುತ್ತಿರುವ ಭೌತಿಕ ರೂಪಕ್ಕೆ ಅತಿಯಾಗಿ ಅಂಟಿಕೊಂಡಿರುವುದಾಗಿದೆ, ಆ ರೂಪ ಸತ್ತೆಯ ಶಾಶ್ವತ ನೈಜತೆ ಎಂಬಂತೆ ಕಂಡುಬರುತ್ತದೆ.

ಇದನ್ನು ಜನರು ತಿಳಿದುಕೊಳ್ಳಲಿ ಎಂದು ನಾನು ಪ್ರಾಯೋಗಿಕ ಪ್ರದರ್ಶನದ ಮೂಲಕ ಪ್ರಯತ್ನಿಸುತ್ತೇನೆ. ಜನರಿಗೆ ನಾನು ಭೌತಿಕ ರೂಪದಲ್ಲಿರುವ ಹಾಗೆ, ಅಸ್ಪಷ್ಟವಾಗಿಯೂ ಕೂಡ, ತೋರಿಬರುವುದು ಅಪರೂಪದ್ದಾಗಿರುತ್ತದೆ. ಅದು ಯಾವಾಗಲೂ, ಅವರು ಯಾವುದಕ್ಕೆ ಸಮಾನರಾಗಿರುತ್ತಾರೆ, ಯಾವುದು ಅವರಿಗೆ ಅತ್ಯಂತ ನಿಕಟವಾಗಿರುತ್ತದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ – ಅಲ್ಲಿ ಎಲ್ಲ ಬಗೆಯ ರೂಪಗಳಿರುತ್ತವೆ. ಮತ್ತು ಆ ವಿಶಿಷ್ಟ ರೂಪ ನನ್ನ ಈ ದೇಹವಿದ್ದ (ಶ್ರೀಮಾತೆಯವರು ತಮ್ಮ ದೇಹ ಸ್ಪರ್ಶಿಸಿ ತೋರಿಸುತ್ತಾರೆ) ಹಾಗೆಯೇ ಇದೆ ಎಂದು ಅವರಿಗೆ ತಿಳಿಸಿಕೊಡಲು ನಾನು ಪ್ರಯತ್ನ ಮಾಡುತ್ತೇನೆ. ಸತ್ಯ ಹೇಳುವುದಾದರೆ ಅದು ಹೆಚ್ಚು ನಿಜವಾಗಿ ನನ್ನದಾಗಿರುತ್ತದೆ. ನಿಜವಾದ ರೂಪ – ದೈವಿಕ ರೂಪ – ಕುರಿತು ಹೇಳುವುದಾದರೆ ಅದರ ನೋಟವನ್ನು ಸಹಿಸಿಕೊಳ್ಳಲು ಮನುಷ್ಯ ಅದನ್ನು ಪರಮೋಚ್ಚನಿಗೆ ನೇರವಾಗಿ ಸಂಬಂಧಿಸಿರುವಂತೆ ನೋಡಲು ಶಕ್ತನಾಗಿರಬೇಕು. ಹಾಗಾಗಿ ಜನರು "ನಾನು ನಿಮ್ಮನ್ನು ನೋಡಲು ಬಯಸುತ್ತೇನೆ" ಇಲ್ಲವೆ "ನಾನು ನಿಮ್ಮನ್ನು ನೋಡುತ್ತಿದ್ದೇನೆ" ಎಂದು ಹೇಳಿದಾಗ ಅವರು ತಮಗೆ ಪರಿಚಿತವಿದ್ದ ನನ್ನ ಮುಖವನ್ನು ಕುರಿತು ಹೇಳುತ್ತಾರೆ. ಆದರೆ ಈ ರೂಪಗಳ ಪ್ರವಾಹಗಳೆಲ್ಲವೂ ನಿಜವಾದವುಗಳು ಮತ್ತು ಅವುಗಳಲ್ಲಿ ಹೆಚ್ಚಿನವು ಈ ದೇಹ ನೋಡಿದವುಗಳಿಗಿಂತ ಹೆಚ್ಚು ನಿಜವಾದವುಗಳು. ನನ್ನ ದೇಹ ನನ್ನ ಪ್ರಜ್ಞೆಗೆ, ಯಾವಾಗಲೂ, ಎಷ್ಟೊಂದು ಕರುಣಾಜನಕವಾಗಿ ಅಂದಾಜಿನದಾಗಿತ್ತು – ಅಣಕ ಚಿತ್ರಣವಾಗಿತ್ತು! ಅಣಕ ಚಿತ್ರಣವೂ ಅಲ್ಲ, ಸದೃಶವಾದದ್ದೂ ಅಲ್ಲ.

ಅದಕ್ಕೆ ಅದರ ಒಳ್ಳೆಯ ಗುಣಗಳಿದ್ದವು. (ನಾನು ಭೂತಕಾಲದ್ದನ್ನು ಕುರಿತು ಮಾತನಾಡುತ್ತಿರುವುದಕ್ಕೆ ಅಂಟಿಕೊಂಡ ಹಾಗಿದೆ ಅದು ಸ್ವಯಂಪ್ರೇರಿತವಾದದ್ದು.) ಆ ಗುಣಗಳಿಗಾಗಿ ಅದನ್ನು ನಿರ್ಮಾಣ ಮಾಡಲಾಗಿತ್ತು, ಆಯ್ದುಕೊಳ್ಳಲಾಗಿತ್ತು. ವ್ಯಾವಹಾರಿಕ ಉದ್ದೇಶಗಳಿಗೆ ಈ ದೇಹ ಬಹಳ ಅವಶ್ಯವಾಗಿತ್ತು, ಆದರೆ ಪ್ರಕಟಣೆಯ ವಿಷಯ ಬಂದಾಗ! ...

ಎಂದಿಗೂ ಈ ರೂಪದ ಬಗ್ಗೆ ಭವ್ಯ ಆಸಕ್ತಿ ಇರಲಿಲ್ಲ, ಪ್ರಜ್ಞೆಯ ಹೊರತಾಗಿ ಎಂದಿಗೂ ಯಾವುದಕ್ಕೂ ಆಸಕ್ತಿ ಇರಲಿಲ್ಲ (ಪೂರ್ತಿ ಅಜ್ಞಾನದ ಸ್ಥಿತಿಯಲ್ಲಿಯೂ ಕೂಡ), – ಹೌದು, ಈ ಪ್ರಜ್ಞೆಯ ಮೂಲಕ ಏನೋ ಒಂದು ಬಹಳ

ಮಹತ್ವದ್ದನ್ನಾಗಿ ಮಾಡಿತು, "ಇದು ಬಹಳ ಮೌಲ್ಯವುಳ್ಳದ್ದು" ಎಂದು ಹೇಳುತ್ತ ಅದು ನಾಶವಾಗುವುದಕ್ಕೆ ಅನುವು ಮಾಡಿಕೊಡುತ್ತಿರಲಿಲ್ಲ. ಆದರೆ ದೇಹ, ... ಅದು ಬಹಳ ಒಳ್ಳೆಯ ಉಪಕರಣ ಕೂಡ ಅಲ್ಲ, ಕೇವಲ ವಿನಮ್ರವಾದದ್ದು, ನಮ್ಯವಾದದ್ದು, ಎಲೆಮರೆ ಕಾಯಿಯಂತಿರುವಂತಹದು ಮತ್ತು ಪ್ರತಿಯೊಂದು ಆವಶ್ಯಕತೆಗೆ ತಕ್ಕಂತೆ ತನಗೆ ರೂಪಕೊಟ್ಟುಕೊಳ್ಳುವಂತಹದು. ಎಲ್ಲ ದೃಷ್ಟಿಕೋನಗಳಿಗೆ ತನ್ನನ್ನು ರೂಪಿಸಿಕೊಳ್ಳುವ, ಹಾಗೂ ಸಿದ್ಧಿಸಿಕೊಳ್ಳಲು ಯೋಗ್ಯವಾದದ್ದೆಂದು ಆಶಿಸಿದ್ದನ್ನು ಸಿದ್ಧಿಸಿಕೊಳ್ಳುವ ಒಂದು ಸಾಮರ್ಥ್ಯ ಆ ದೇಹದಲ್ಲಿತ್ತು, ಈ ನಮ್ಯತೆ ಅದರ ಒಂದು ಸದ್ಗುಣವಾಗಿತ್ತು. ತನ್ನಲ್ಲಿ ಕ್ಷಮತೆ ಇಲ್ಲದುದರ ಬಗ್ಗೆ ಅರಿವುಳ್ಳದ್ದು, ಆದರೆ ಕೈಕೊಳ್ಳಬೇಕಾದುದು ಏನೇ ಆಗಿರಲಿ, ಸಿದ್ಧಿಸಿಕೊಳ್ಳಬೇಕಾದುದು ಏನೇ ಆಗಿರಲಿ, ಅದಕ್ಕಾಗಿ ಕ್ಷಮತೆಯನ್ನು ಹೊಂದಿರುವಂತಹದು. ಈ ಸಿದ್ಧತೆಯೊಂದಿಗೆ ಅದನ್ನು ಪ್ರಜ್ಞಾಪೂರ್ವಕವಾಗಿ ರೂಪಿಸಿಲಾಗಿತ್ತು, ಏಕೆಂದರೆ ಅವಶ್ಯವಾದದ್ದು ಅದೇ ಆಗಿತ್ತು. ಮತ್ತು ಅದಕ್ಕೆ ಯಾವುದೂ ಅತ್ಯಂತ ಭವ್ಯವಾದದ್ದಾಗಿರಲಿಲ್ಲ ಇಲ್ಲವೆ ಜಯಿಸಲು ಅಸಾಧ್ಯವಾಗಿರಲಿಲ್ಲ, ಏಕೆಂದರೆ ಅಲ್ಲಿ ಚಿಕ್ಕ ವ್ಯಕ್ತಿಯೊಂದು ತನ್ನದೇ ಅಲ್ಪತನದ ಭಾವನೆಯಿಂದ ಪ್ರತಿರೋಧವನ್ನು ಒಡ್ಡುತ್ತಿರಲಿಲ್ಲ. ಇಲ್ಲ, ಅದಾವುದೂ ಮಹತ್ವದ್ದಲ್ಲ. – ದೈವೀ ಪ್ರಜ್ಞೆ ಮುಖ್ಯವಾದದ್ದು, ಅದು ವಿಶ್ವಕ್ಕಿಂತಲೂ ಹೆಚ್ಚು ವಿಸ್ತಾರವಾದದ್ದು. ಆ ಪ್ರಜ್ಞೆಯೊಂದಿಗೆ ಪ್ರತಿಯೊಂದು ಆವಶ್ಯಕತೆಗೆ ಸರಿಹೊಂದಿಸಿಕೊಳ್ಳುವ ಮತ್ತು ತನಗೆ ರೂಪಕೊಟ್ಟುಕೊಳ್ಳುವ ಕ್ಷಮತೆಯಿತ್ತು.

**(ಅನುಯಾಯಿಯೊಂದಿಗೆ ಮಾತುಕತೆ, 4–7–1962) – ಶ್ರೀಮಾತೆ**

*

**ಹೆಚ್ಚು ಕಾಲ ಬಾಳುವುದು: ಮುಂದಿರಿಸಬೇಕಾದ ಹೆಜ್ಜೆ**

ಮನುಕುಲ ಕೂಡಲೆ ಇರಿಸಬೇಕಾದ ಮುಂದಿನ ಹೆಜ್ಜೆ ಪ್ರತ್ಯೇಕತಾಕಾಂಕ್ಷೆ ಇಲ್ಲದಂತಾಗಿಸಬೇಕಾಗಿದುದರತ್ತ ಇರಬೇಕು, ಅದು ಕ್ರಿಯೆಯಲ್ಲಿದೆ, ಕೇವಲ ಸಂಕೇತವಾಗಿ ಅಲ್ಲ. ವಿಭಜನೆ ಹಾಗೂ ಪ್ರತ್ಯೇಕತೆಗಳ ಪರಿಣಾಮವಾಗಿ ಇದೆ. ಅವರೆಲ್ಲರೂ 'ಇದು ಇರಲಿ, ಅದು ಬೇಡ' ಎಂದು ಹೇಳುತ್ತಾರೆ. – ಇಲ್ಲ, ಇದು ಮತ್ತು ಅದು, ಇದೂ ಕೂಡ ಹಾಗೂ ಅದೂ ಕೂಡ ಮತ್ತು ಪ್ರತಿಯೊಂದೂ ಒಂದೇ ವೇಳೆಗೆ ಒಟ್ಟಿಗಿರುವುದಕ್ಕಾಗಿ ಸಾಕಷ್ಟು ನಮ್ಯವಾಗಿರುವುದು, ವಿಸ್ತಾರ ಹೊಂದಿರುವುದು. ಸದ್ಯ ಪ್ರತಿಯೊಂದು ಕ್ಷೇತ್ರದಲ್ಲಿ, ದೇಹದಲ್ಲಿಯೂ ಕೂಡ ಇದರ ವಿರುದ್ಧ ನನ್ನನ್ನು ನೂಕುತ್ತಿದ್ದೇನೆ. "ಇದಿರಲಿ, ಅದು ಬೇಡ, ಇದಿರಲಿ ಇಲ್ಲವೆ



ಅದಿರಲಿ" ಎಂಬುದನ್ನು ದೇಹ ರೂಢಿಸಿಕೊಂಡಿದೆ. ಅಲ್ಲ, ಅದಲ್ಲ; ಇದಿರಲಿ ಹಾಗೂ ಅದಿರಲಿ ಎಂದಿರಬೇಕು.

ಮತ್ತು ಸಹಜವಾಗಿ ಜೀವನ ಹಾಗೂ ಮರಣ ಎಂಬ ಭವ್ಯ ವಿಭಜನೆ ಇದೆ – ಅದಿರುವುದು ಹಾಗೆ. ಪ್ರತಿಯೊಂದೂ ಅದರ ಪರಿಣಾಮವಾಗಿದೆ. ಸರಿ (ಶಬ್ದಗಳು ಹೆಡ್ಡತನದವು, ಆದರೆ...) ಜೀವನ ಮತ್ತು ಮರಣ ಒಟ್ಟಿಗಿರುವುದು ಹೆಚ್ಚುಕಾಲ ಬಾಳುವುದಾಗಿದೆ (overlife).

ಅದನ್ನು ಹೆಚ್ಚುಕಾಲ ಬಾಳುವುದು ಎಂದು ಏಕೆ ಕರೆಯಬೇಕು? ನಾವು ಒಂದು ಬದಿಗೆ ವಾಲಿಕೊಳ್ಳುವ ಪ್ರಲೋಭನ ನಮ್ಮಲ್ಲಿರುತ್ತದೆ: ಪ್ರಕಾಶ ಮತ್ತು ಅಂಧಕಾರ.

ನಾವು ಬಹಳ ಅಲ್ಪರಾಗಿದ್ದೇವೆ. ಮನುಷ್ಯನಿಗೆ ಅಲ್ಪನಾಗಿರುವುದರ ಭಾವನೆ ಬರುತ್ತದೆ.

**(ಅನುಯಾಯಿಯೊಂದಿಗೆ ಮಾತುಕತೆ, 3–1–1970) – ಶ್ರೀಮಾತೆ**

*

**ಅತ್ಯಂತ ಒಳ್ಳೆಯ ಮನೋಭಾವ**

ದೇಹ ಮರಣ ಹೊಂದದೆ ಮರಣ ಹೊಂದಿದ್ದರ ಅನುಭವ ಕುರಿತು ನಾನು ನಿನಗೆ ಆ ಇನ್ನೊಂದು ದಿನ ಹೇಳಿದ್ದೆ. ಅದು ಉಪಯುಕ್ತವಾಗಿದೆ. "ಸರಿ, ಅದು ಒಳ್ಳೆಯದೆ" ಎಂದು ದೇಹ ಹೇಳಿತು.

ದೇಹ ಕರಗಿ ಹೋಗುವುದರೊಂದಿಗೆ ಮಾಯವಾಗಿ ಬಿಡುವ ಇಡಿಯಾದ ಹಳೆಯ ಭ್ರಮೆ ಹೊರಟು ಹೋಗಿ ಬಹಳ ಕಾಲವಾಯಿತು. ಸಹಜವಾಗಿ ಅದು ಈಗ ಮೃತ್ಯುವಿನಲ್ಲಿ ಚೂರು ಚೂರಾಗಿ ಹೋದರೂ ಅದರ ಪ್ರಜ್ಞೆಯ ಕ್ಷೇತ್ರ ವಿಶಾಲವಾಗುವುದು ಎಂದು ಅದಕ್ಕೆ ಮನವರಿಕೆಯಾಗಿದೆ. ಅದನ್ನು ಹೇಗೆ ವಿವರಿಸಿ ಹೇಳಬೇಕೆಂಬುದು ನನಗೆ ತಿಳಿಯದು. ಏಕೆಂದರೆ ಪ್ರಜ್ಞೆಗೆ ವ್ಯಕ್ತಿವಿಶಿಷ್ಟತೆಯ ಅರ್ಥ ಮತ್ತು ವೈಯಕ್ತಿಕವಾಗಿರುವುದರ ಆವಶ್ಯಕತೆ ಮಾಯವಾಗಿ ಹೋಗಿದೆ. ದೈವೀ ಸತ್ಯಕ್ಕೆ ದೇಹ ಒಡ್ಡುವ ಪ್ರತಿರೋಧದಿಂದಾಗಿ ಅದು ವೇದನೆಗೊಳಗಾಗುವುದು ಸಾಧ್ಯವಾಗುವಂತೆ ಮಾಡುತ್ತದೆ ಎಂಬುದನ್ನು ನಾನು ಸ್ಪಷ್ಟವಾಗಿ ನೋಡುತ್ತೇನೆ. ಪ್ರಜ್ಞೆಗೆ ಸಂಪೂರ್ಣ ಅಂಟಿಕೊಳ್ಳುವಿಕೆ ಇದ್ದಾಗ ವೇದನೆ ತತ್ಕ್ಷಣ ಮಾಯವಾಗುತ್ತದೆ. ...

ಯಾವುದರಲ್ಲಿ, ಮೂಲಭೂತವಾಗಿ, ತಾನು ಪ್ರತ್ಯೇಕವಾದ ಏನೋ ಒಂದು ಎಂಬ ಭ್ರಮೆ ಇದೆಯೋ ಅದು ಕರಗಿ ಹೋಗಬೇಕು. "ಅದು ನನ್ನ ವ್ಯವಹಾರವಲ್ಲ,

ನಾನು ಅಸ್ತಿತ್ವದಲ್ಲಿಲ್ಲ" ಎಂದು ಅದು ತನಗೆ ತಾನೇ ಹೇಳಿಕೊಳ್ಳಬೇಕು. ಅದು ಹೊಂದಬಹುದಾದ ಅತ್ಯಂತ ಒಳ್ಳೆಯ ಮನೋಭಾವ. ನಂತರ ಅದು ಭವ್ಯ ವಿಶ್ವಂಭರ ಲಯಬದ್ಧತೆಯಲ್ಲಿ ಸಾಗಿ ಹೋಗುತ್ತದೆ.

**(ಅನುಯಾಯಿಯೊಂದಿಗೆ ಮಾತುಕತೆ, 31–1–1970) – ಶ್ರೀಮಾತೆ**

*

## ಮೃತ್ಯುವಿನ ಮೇಲೆ ಶ್ರೀಮಾತೆಯವರು ಕೈಕೊಂಡ ಕಾರ್ಯ

### ಮೃತ್ಯುವಿನ ಅಸುರ ಮತ್ತು ಜೀವನದ ದೈವೀ ಮಂತ್ರ

ಆಯ್ದುಕೊಳ್ಳುವುದರ ಮೂಲಕ ನಾನು ನಾಲ್ಕು ಅಸುರರನ್ನು ಭೇಟಿ ಮಾಡಲಿಲ್ಲ – ಅದು ಪರಮೋಚ್ಚನ ನಿರ್ಧಾರವಾಗಿತ್ತು. ಧರ್ಮಗಳು ಸತಾನ ಎಂದು ಕರೆಯುವ ಅಸುರ ಮೊದಲನೆಯವನಾಗಿದ್ದ. ಅವನನ್ನು ಪರಿವರ್ತನೆಗೆ ಒಳಪಡಿಸಲಾಗಿತ್ತು, ಅವನು ಇನ್ನೂ ಕಾರ್ಯಪ್ರವೃತ್ತನಾಗಿದ್ದಾನೆ. ಎರಡನೆಯವ ವೇದನೆಯ ಅಸುರ, ಅವನು ತನ್ನನ್ನು ಪರಮೋಚ್ಚನಲ್ಲಿ ಲಯಗೊಳಿಸಿಕೊಂಡ. ಮೂರನೆಯವ ಮೃತ್ಯುವಿನ ಪ್ರಭು, ಅವನು ಥಿಯೋನ್ ಆಗಿದ್ದ. ನಾಲ್ಕನೆಯವನು ಜಗತ್ತಿನ ಮೇಲೆ ಪ್ರಭುತ್ವ ನಡೆಸುತ್ತಿರುವ ಮಿಥ್ಯೆಯ ಪ್ರಭು.

ಥಿಯೋನ್ ಮೃತ್ಯುವಿನ ಪ್ರಭುವಿನ ವಿಭೂತಿಯಾಗಿದ್ದ.

ಅದೇನೇ ಇರಲಿ, ಥಿಯೋನ್‌ನಿಂದ ನಾನು ಪ್ರಾಣ(life)ದ ಮಂತ್ರವನ್ನು ಮೊದಲು ಕಂಡುಕೊಂಡೆ. ಆ ಮಂತ್ರ ಪ್ರಾಣವನ್ನು ಕೊಡುತ್ತಿತ್ತು. ಅವನು ಅದನ್ನು ನನ್ನಿಂದ ಪಡೆಯಲು ಮತ್ತು ವಶಪಡಿಸಿಕೊಳ್ಳಲು ಬಯಸಿದ್ದ. – ಅದು ಅತ್ಯಂತ ಪ್ರಬಲವಾಗಿತ್ತು! (ಅದು ಮೃತರಾದ ಯಾರನ್ನಾದರೂ ಮರಳಿ ಜೀವಿಸುವಂತೆ ಮಾಡುತ್ತದೆ, ಆದರೆ ಅದು ಅದರ ಸಾಮರ್ಥ್ಯದ ಅತಿ ಸ್ವಲ್ಪ ಭಾಗ), ಅದು ಒಂದು ಸ್ಥಳದಲ್ಲಿ ಮುಚ್ಚಿಹಾಕಿಕೊಂಡಿತ್ತು,[1] ಅದರ ಮೇಲೆ ಮುದ್ರೆಯನ್ನಿರಿಸಲಾಗಿತ್ತು, ಅದರ ಮೇಲೆ ಸಂಸ್ಕೃತ ಭಾಷೆಯಲ್ಲಿ ನನ್ನ ಹೆಸರಿತ್ತು. ಆ ಸಮಯದಲ್ಲಿ ನಾನು ಸಂಸ್ಕೃತ ಭಾಷೆಯನ್ನು ತಿಳಿದಿರಲಿಲ್ಲ, ಆದರೆ ಅವನಿಗೆ ಆ ಭಾಷೆ ತಿಳಿದಿತ್ತು, ಮತ್ತು ಅವನು ಅದಿದ್ದ ಸ್ಥಳಕ್ಕೆ ಕರೆದೊಯ್ದಾಗ, ನಾನು ನೋಡಿದ್ದನ್ನು ಅವನಿಗೆ ಹೇಳಿದೆ: "ಅಲ್ಲೊಂದು ಬಗೆಯ ರೇಖಾಚಿತ್ರವಿದೆ, ಅದು ಸಂಸ್ಕೃತ ಭಾಷೆಯದಾಗಿರಬೇಕು" (ಅಕ್ಷರಗಳು ಸಂಸ್ಕೃತದಲ್ಲಿವೆ ಎಂಬುದನ್ನು ನಾನು ಗುರುತಿಸಬಲ್ಲವಳಾಗಿದ್ದೆ.)

1. ಆಂತರಿಕ ಆಯಾಮಗಳ ಒಂದು ರಹಸ್ಯ ಪ್ರಾಂತ.



ನಾನು ನೋಡಿದ್ದನ್ನು ಉಚ್ಚರಿಸಿ ಹೇಳು ಎಂದು ಅವನು ಕೇಳಿದ ಮತ್ತು ಅದನ್ನು ನಾನು ಕೈಕೊಂಡೆ. ಅದು ಸಂಸ್ಕೃತದಲ್ಲಿ ಬರೆದಿದ್ದ ನನ್ನ ಹೆಸರು ಮಿರ್ರಾ ಆಗಿತ್ತು. – ಆ ಮಂತ್ರ ನನಗಾಗಿತ್ತು. ಮತ್ತು ನಾನು ಮಾತ್ರ ಅದನ್ನು ತೆರೆದಿರಿಸಬಲ್ಲವಳಾಗಿದ್ದೆ. "ಅದನ್ನು ತೆರೆದಿರಿಸಿ ಅಲ್ಲಿ ಏನಿದೆ ಎಂಬುದನ್ನು ಹೇಳು" ಎಂದು ಅವನು ಹೇಳಿದ. (ಇದೆಲ್ಲವೂ ನಾನು ಮೂರ್ಚ್ಛೆಯಲ್ಲಿ ಸಮಾಧಿಯ ಸ್ಥಿತಿಯಲ್ಲಿದ್ದಾಗ ನಡೆದು ಹೋಗಿತ್ತು) ಆಗ ಕೂಡಲೆ ನನ್ನಲ್ಲಿದ್ದ ಏನೋ ಒಂದು ತಿಳಿದುಕೊಂಡಿತು ಮತ್ತು ನಾನು 'ಇಲ್ಲ' ಎಂದು ಉತ್ತರ ನೀಡಿದೆ ಮತ್ತು ಅದನ್ನು ಓದಲಿಲ್ಲ.

ನಾನು ಶ್ರೀ ಅರವಿಂದರ ಜೊತೆಗಿದ್ದಾಗ ಮತ್ತೆ ನಾನು ಅದನ್ನು ಕಂಡುಕೊಂಡೆ ಮತ್ತು ಅದನ್ನು ಶ್ರೀ ಅರವಿಂದರಿಗೆ ಕೊಟ್ಟೆ.

**(ಅನುಯಾಯಿಯೊಂದಿಗೆ ಮಾತುಕತೆ, 5–11–1961) – ಶ್ರೀಮಾತೆ**

*

### ಪರಿವರ್ತನೆಯ ಕಾರ್ಯದಲ್ಲಿರುವ ತೊಂದರೆ

ಎಲ್ಲವೂ ಪರಮೋಚ್ಚವಾಗಿದೆ, ಎಲ್ಲವೂ ಅದ್ಭುತವಾಗಿದೆ, ವಿಸ್ಮಯಕಾರಕವಾಗಿದೆ, ಎಲ್ಲವೂ ಅದ್ಭುತ ಪ್ರೇಮದಿಂದ ತುಂಬಿಕೊಂಡಿದೆ – ಎಲ್ಲವೂ ಗಾಢವಾದ ಸಂತೋಷದಲ್ಲಿದೆ – ಅದು ಬದಲಾಗದ, ಎಂದೆಂದಿಗೂ ಉಪಸ್ಥಿತವಿರುವ ಸ್ಥಿತಿಯಾಗಿದೆ ಎನಿಸುವುದರಲ್ಲಿ ಇರುವುದು, ಅಂತಹದರಲ್ಲಿದ್ದು ನಂತರ ಈ ದೇಹದ ದ್ರವ್ಯ ಎಲ್ಲ ಬಗೆಯ ಹೆಡ್ಡತನದಿಂದ ಅದನ್ನು ವಿರೋಧಿಸುವ ಸ್ಥಿತಿಯಲ್ಲಿರುವುದು – ದೃಷ್ಟಿಯನ್ನು ಹಾಗೂ ಬಲವನ್ನು ಕಳೆದುಕೊಳ್ಳುವ, ಇಲ್ಲಿ ಅಲ್ಲಿ ನೋವಿರುವ, ಅವ್ಯವಸ್ಥೆ ಇರುವ, ದೌರ್ಬಲ್ಯವಿರುವ, ಎಲ್ಲ ಬಗೆಯ ಕ್ಷಮತೆಗಳನ್ನು ಕಳೆದುಕೊಂಡಿರುವ ಸ್ಥಿತಿಯಲ್ಲಿರುವುದು. ಮತ್ತು ಅದೇ ಕಾಲದಲ್ಲಿ, ದೇಹಕ್ಕೆ ಏನೇ ಆಗಲಿ, ಅದರ ಅಂತರಂಗದಲ್ಲಿ "ಓ ಪ್ರಭು, ನಿನ್ನ ದೈವೀಕೃಪೆ ಅನಂತವಾಗಿದೆ," ಎಂದಿರುವುದು. ಈ ಬಗೆಯ ವೈರುಧ್ಯ ಬಹಳ ಕದಡಿಸುವಂತಹದು.

ಅನುಭವದಿಂದ ನನಗೆ ತಿಳಿದುಬಂದದ್ದು ಏನೆಂದರೆ ಮನುಷ್ಯ ಸಾಧುಸಂತನೋ, ಇಲ್ಲವೆ ಋಷಿಯೋ ಆಗಿರುವುದರಲ್ಲಿ ತೃಪ್ತಿ ಕಂಡುಕೊಂಡರೆ ಮತ್ತು ಸತತ ಸರಿಯಾದ ಮನೋಭಾವವನ್ನು ಉಳಿಸಿಕೊಂಡು ಬಂದರೆ ಎಲ್ಲವೂ ಸರಿಯಾಗಿ ಸಾಗಿ ಹೋಗುವುದು – ದೇಹ ರೋಗಕ್ಕೀಡಾಗುವುದಿಲ್ಲ, ರೋಗದ ಆಕ್ರಮಣವಾದರೂ ಅದರಿಂದ ಬೇಗ ಗುಣಮುಖವಾಗುತ್ತದೆ. ಅಲ್ಲಿ ಪರಿವರ್ತನೆ–ಗೊಳಪಡಿಸುವ ಈ ಸಂಕಲ್ಪ ಇಲ್ಲದೆ ಇರುವವರೆಗೆ ಅದು ಹಾಗಿರುತ್ತದೆ.

ಪರಿವರ್ತನೆಗೆ ಒಳಪಡಿಸಬೇಕೆನ್ನುವ ಸಂಕಲ್ಪದ ವಿರುದ್ಧ ಎಲ್ಲ ತೊಂದರೆಗಳು ಮೇಲೆದ್ದು ಬರುತ್ತವೆ. ಅದು ಹಾಗಿರುವಾಗ ಮನುಷ್ಯ: "ಸರಿ, ಅದೆಲ್ಲ ಸರಿಯಾದದ್ದೇ, ವಿಷಯಗಳು ಅವಿದ್ದ ಹಾಗಿರಲಿ, ನಾನು ಚಿಂತೆ ಮಾಡುವುದಿಲ್ಲ, ನಾನು ಪರಿಪೂರ್ಣವಾಗಿ ಸಂತೋಷದಿಂದ ಇರುವೆ, ದಿವ್ಯಾನಂದದ ಸ್ಥಿತಿಯಲ್ಲಿರುವೆ" ಎಂದು ಹೇಳಿದರೆ ದೇಹಕ್ಕೆ ತೃಪ್ತಿಯ ಭಾವನೆ ಬರತೊಡಗುತ್ತದೆ!

**(ಅನುಯಾಯಿಯೊಂದಿಗೆ ಮಾತುಕತೆ, 15–7–1961) – ಶ್ರೀಮಾತೆ**

*

**ತಾಳ್ಮೆಯ ಆವಶ್ಯಕತೆ**

ಸಮಸ್ಯೆ ಅದೇ ಆಗಿದೆ: ಇಡಿಯಾಗಿ ಹೊಸದಾದ ಏನೋ ಒಂದನ್ನು ಭೌತದ್ರವ್ಯದಲ್ಲಿ ಒಳಸೇರಿಸಲಾಗುತ್ತಿದೆ. ಮತ್ತು ದೇಹ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತದೆ.

ಪ್ರಕೃತಿಯೊಡನೆ ನನ್ನ ಸಂದರ್ಶನದ ನಂತರ, ಅದು ನನ್ನೊಡನೆ ಸಹಕರಿಸುತ್ತದೆ ಎಂದು ತಿಳಿದುಬಂದಾಗ, ಈ ತೊಂದರೆ ನಿಂತು ಹೋಗುತ್ತದೆಂದು ಭಾವಿಸಿದ್ದೆ. ಬಹಳಷ್ಟು ವಿಷಯಗಳು ಅಸಾಧಾರಣವಾಗಿ ಸುಧಾರಿಸಿವೆ. (ಪ್ರಕೃತಿಯ ಒಂದು ಭಾಗ ಸಹಕರಿಸುತ್ತಿದೆ.) ಆದರೆ ಇದಲ್ಲ, ಸರಳವಾಗಿ ಹಾಗೂ ಸ್ಪಷ್ಟವಾಗಿ ಅದು ಅವಚೇತನದಿಂದ ಹಾಗೂ ಅಚೇತನದಿಂದ ಬರುತ್ತದೆ (ಪ್ರಜ್ಞೆ ಇರುವಲ್ಲೆಲ್ಲ ಎಲ್ಲವೂ ಒಳ್ಳೆಯದಾಗಿರುತ್ತದೆ) ಅದು ಎಲ್ಲ ಕಾಲಕ್ಕೆ ಮೇಲಕ್ಕೇರುತ್ತಿರುತ್ತದೆ, ಓಹ್ ಜುಗುಪ್ಸೆ ತರಿಸುವ ರೀತಿಯಲ್ಲಿ ಪಟ್ಟುಹಿಡಿದು ಮೇಲಕ್ಕೇರುತ್ತದೆ!

ಉದಾಹರಣೆಗೆ, ಪ್ರಾರಂಭದಲ್ಲಿ ನಾನು ಹೇಳಿದ ಹಾಗೆ, ಸಾಧು ಸಂತರಿಗೆ, ಋಷಿಗಳಿಗೆ ದೇಹದ ರೂಪಗೊಳ್ಳುವಿಕೆ ಅತಿ ಕಡಿಮೆ ಮತ್ತು ಗೌಣವಾದ ಮಹತ್ವ ಹೊಂದಿರುತ್ತದೆ. ಆದರೆ ಈ ಅತಿಮಾನಸದ ಕಾರ್ಯಕ್ಕಾಗಿ ದೇಹದ ರೂಪಗೊಳ್ಳುವಿಕೆ ಬಹುಮಟ್ಟಿಗೆ ನಿರ್ಧಾರಕ ಮಹತ್ವ ಹೊಂದಿರುತ್ತದೆ ಮತ್ತು ಆಧ್ಯಾತ್ಮಿಕ ಅಂಶಗಳೊಂದಿಗೆ ಹಾಗೂ ಮಾನಸಿಕ ಸಾಮರ್ಥ್ಯದೊಂದಿಗೆ ಯಾವ ಸಂಬಂಧವನ್ನೂ ಹೊಂದಿರುವುದಿಲ್ಲ, ಈ ಬದಿಗಳಿಗೆ ಯಾವ ಮಹತ್ವವೂ ಇರುವುದಿಲ್ಲ. ತಾಳಿಕೊಳ್ಳುವ ಹಾಗೂ ಉಳಿದುಕೊಳ್ಳುವ ಕ್ಷಮತೆ, ಅತ್ಯಂತ ಮಹತ್ವದ್ದಾಗಿರುತ್ತದೆ.

ಸರಿ, ಈ ವಿಷಯ ಕುರಿತು ಹೇಳುವುದಾದರೆ ನನ್ನ ದೇಹ ಶ್ರೀ ಅರವಿಂದರ



ದೇಹ ಹೊಂದಿದ್ದ ಕ್ಷಮತೆಗಿಂತ ಅನಂತ ಪಟ್ಟು ಹೆಚ್ಚು ಕ್ಷಮತೆ ಹೊಂದಿದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಅದು ಮೂಲಭೂತ ಸಮಸ್ಯೆಯಾಗಿತ್ತು – ಏಕೆಂದರೆ ಇಬ್ಬರ ನಡುವಿನ (ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ನಡುವಿನ) ಗುರುತಿಸಿಕೊಳ್ಳುವಿಕೆ ಮಗುವಿನ ಆಟದ ಹಾಗಿತ್ತು, ಅದು ಸಮಸ್ಯೆ ಆಗಿರಲೇ ಇಲ್ಲ. ನಾನು ಅವರಲ್ಲಿ ಮುಳುಗಿ ಹೋಗುವುದಾಗಲಿ, ಅವರು ನನ್ನಲ್ಲಿ ಮುಳುಗಿ ಹೋಗುವುದಾಗಲಿ ಸಮಸ್ಯೆಯಾಗಿರಲಿಲ್ಲ, ಕಠಿಣವೂ ಆಗಿರಲಿಲ್ಲ. ಈ ವಿಷಯವನ್ನೇ ನಿಖರವಾಗಿ ಕುರಿತು ನಮ್ಮಿಬ್ಬರ ನಡುವೆ ಮಾತುಕತೆಗಳಾಗಿದ್ದವು. ಪ್ರಾಧಾನ್ಯವಾಗಿದ್ದ ಸ್ಥಿತಿಗಳತ್ತ ನೋಡಿದೆವು. ಅವು ಹೇಗಿದ್ದವೆಂದರೆ ನಾನು ನನ್ನ ದೇಹವನ್ನು ತ್ಯಜಿಸಿ ವಿಷಾದವಾಗಲಿ, ತೊಂದರೆಯಾಗಲಿ ಇಲ್ಲದೆ ಅವರಲ್ಲಿ ಮುಳುಗಿ ಹೋಗುವೆ ಎಂದು ಹೇಳಿದೆ; ಇದನ್ನು ನಾನು ಶಬ್ದಗಳಲ್ಲಿ ಅವರಿಗೆ ಹೇಳಿದೆ, ಅದನ್ನು ಕುರಿತು ಕೇವಲ ಯೋಚಿಸಿರಲಿಲ್ಲ. ಅವರೂ ಕೂಡ ನನಗೆ ಶಬ್ದಗಳಲ್ಲಿ ಉತ್ತರ ನೀಡಿದರು: "ಈ ದೈವೀ ಕಾರ್ಯಕ್ಕಾಗಿ ನಿಮ್ಮ ದೇಹ ಅತ್ಯವಶ್ಯವಾಗಿದೆ, ನಿಮ್ಮ ದೇಹವಿಲ್ಲದೆ ಆ ಕಾರ್ಯವನ್ನು ಕೈಕೊಳ್ಳಲಾಗುವುದಿಲ್ಲ" ನಂತರ ನಾನು ಏನನ್ನೂ ಹೇಳಲಿಲ್ಲ. ಅದು ಇನ್ನು ಮುಂದೆ ನನಗೆ ಸಂಬಂಧಿಸಿದುದು ಆಗಿರಲಿಲ್ಲ, ಮತ್ತು ಅದು ಅಲ್ಲಿಗೆ ಕೊನೆಗೊಂಡಿತು.

ಶ್ರೀ ಅರವಿಂದರು ದೇಹವನ್ನು ತ್ಯಜಿಸುವುದಕ್ಕಿಂತ ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚು ಕಾಲದ ಹಿಂದೆ 1949 ರಲ್ಲಿ ಈ ಮಾತುಕತೆ ನಡೆದಿತ್ತು.

ಮತ್ತು ಅದು ನಿಜವಾಗಿ ಆ ರೀತಿಯದಾಗಿದೆ.

**(ಅನುಯಾಯಿಯೊಂದಿಗೆ ಮಾತುಕತೆ, 7–7–1961) – ಶ್ರೀಮಾತೆ**

*

**ದೇಹ – ಒಂದು ರಣಾಂಗಣ**

ಕೊನೆಯ ವಿಶ್ಲೇಷಣೆಯಲ್ಲಿ ಪ್ರತಿಯೊಂದೂ, ಸ್ಪಷ್ಟವಾಗಿ, ಪರಮೋಚ್ಚನ ಸಂಕಲ್ಪದ ಮೇಲೆ ಅವಲಂಬಿಸಿರುತ್ತದೆ, ಏಕೆಂದರೆ ಆ ಪ್ರಶ್ನೆಯನ್ನು ಆಳವಾಗಿ ನೋಡಿದಾಗ ಭೌತಿಕ ನಿಯಮಗಳು ಹಾಗೂ ಪ್ರತಿರೋಧ ಇವು ಅವನಿಗೆ ಏನೂ ಅಲ್ಲ, ಆದರೆ ಈ ಬಗೆಯ ನೇರವಾದ ಮಧ್ಯ ಪ್ರವೇಶ ಕೊನೆಯ ಮಿತಿಯಲ್ಲಿ ಸಂಭವಿಸುತ್ತದೆ; ಪ್ರಕಟಣೆಯನ್ನು ಆಳುವ ನಿಯಮಗಳ ಇಡೀ ಕಟ್ಟಿನ ವಿರುದ್ಧ ಅವನ ಸಂಕಲ್ಪ ಅಭಿವ್ಯಕ್ತಗೊಳ್ಳಬೇಕಾಗಿದ್ದರೆ, ಸರಿ, ಅದು ಕೊನೆಯ ಸೆಕೆಂಡಿನಲ್ಲಿ

ಬರುತ್ತದೆ. ಶ್ರೀ ಅರವಿಂದರು 'ಸಾವಿತ್ರಿ' ಮಹಾಕಾವ್ಯದಲ್ಲಿ ಇದನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಆ ಗ್ರಂಥದಲ್ಲಿ ಕನಿಷ್ಠ ಪಕ್ಷ ಮೂರು ಸಲ ಅವರು ಈ ದೈವೀ ಸಂಕಲ್ಪವನ್ನು ಅಭಿವ್ಯಕ್ತಪಡಿಸಿದ್ದಾರೆ. ಈ ಸಂಕಲ್ಪ, ಸ್ಥಾಪಿತಗೊಂಡ ಎಲ್ಲ ನಿಯಮಗಳನ್ನು, ಅವುಗಳ ಪರಿಣಾಮಗಳನ್ನು, ಪ್ರಕಟವಾದುದರ ಇಡೀ ಭೀಕರ ಮಹಾವಿಗ್ರಹ(colossus)ವನ್ನು ತೆಗೆದು ಹಾಕುತ್ತದೆ, ಅದರಿಂದಾಗಿ ಅದೆಲ್ಲದರ ಮುಖದ ಮುಂದೆ 'ತತ್' ತನ್ನನ್ನು ಪ್ರಕಟಿಸಬಲ್ಲದು. – ಇದು ಸಾಧ್ಯತೆಯ ಕೊನೆಯ ಮಿತಿಯಲ್ಲಿ, ಕಟ್ಟಕಡೆಯ ಸೆಕೆಂಡಿನಲ್ಲಿ ಸಂಭವಿಸಬಹುದು.

ಕೆಲವು ತಿಂಗಳುಗಳ ಹಿಂದೆ ದೇಹ ಮತ್ತೊಮ್ಮೆ ರಣಾಂಗಣವಾಗಿತ್ತು ಮತ್ತು ಅದು ಎಲ್ಲ ಅಡೆತಡೆಗಳನ್ನು ಎದುರಿಸುತ್ತಿದ್ದಾಗ, ಅನಿಶ್ಚಿತ ಸ್ಥಿತಿಯಲ್ಲಿದ್ದಾಗ ಅದು ತನ್ನನ್ನೇ ಕೇಳಿಕೊಳ್ಳುತ್ತಿತ್ತು, ಬೌದ್ಧಿಕವಾಗಿ ಆಶ್ಚರ್ಯಚಕಿತವಾಗಿರುತ್ತಿರಲಿಲ್ಲ. ಒಂದು ಬಗೆಯ ಗ್ರಹಿಕೆಗಾಗಿ, ಏನನ್ನೋ ಸ್ಪರ್ಶಿಸುವುದಕ್ಕಾಗಿ ಅದು ಯಾವ ದಿಶೆಯತ್ತ ಸಾಗಬೇಕು, ವಿಷಯಗಳು ಯಾವ ರೀತಿಯಲ್ಲಿ ಓರೆಯಾಗುತ್ತಿವೆ ಎಂಬುದನ್ನು ಕುರಿತು ಕುತೂಹಲಿಯಾಗಿರುತ್ತಿತ್ತು, ತನ್ನನ್ನೇ ಕೇಳಿಕೊಳ್ಳುತ್ತಿತ್ತು. ಮತ್ತು ಒಮ್ಮೆಗೆ ಎಲ್ಲ ಜೀವಕೋಶಗಳಲ್ಲಿ ಈ ಭಾವನೆ ಬಂದಿತು (ಅದೆಲ್ಲಿಂದ ಬಂದಿತು ಎಂಬುದು ನನಗೆ ತಿಳಿದಿದೆ): "ಈ ಮಿಶ್ರಣದಿಂದ ನಾವು ಕರಗಿ ಹೋಗುವುದಾದರೆ, ಒಟ್ಟು–ಗೂಡಿರುವಿಕೆಯಿಂದ ವಿಘಟನೆಗೆ ಒಳಗಾಗುವುದಾದರೆ, ಆಗ ನಾವು ಬಾಣದ ಹಾಗೆ ಸಾಗಿ ಹೋಗುತ್ತೇವೆ" – ಅದು ಅದ್ಭುತ ಜ್ವಾಲೆಯಿದ್ದ ಹಾಗಿತ್ತು – "ನೇರವಾಗಿ ಅತಿಮಾನಸ ಜಗತ್ತಿನಲ್ಲಿ ಶ್ರೀ ಅರವಿಂದರನ್ನು ಮತ್ತೆ ಕೂಡಿಕೊಳ್ಳಲು ನಾವೆಲ್ಲ ಹೋಗುತ್ತೇವೆ, ಆ ಜಗತ್ತು ನಮ್ಮ ದ್ವಾರದ ಬಳಿಯಲ್ಲಿಯೇ ಇದೆ." ಅಲ್ಲಿ ಅದೆಂತಹ ಸಂತೋಷವಿತ್ತು! ಅದ್ಭುತವಾದ ಹುರುಪು ಹಾಗೂ ಸಂತೋಷ ಎಲ್ಲ ಜೀವಕೋಶಗಳ ಮೇಲೆ ಪ್ರವಾಹ ರೂಪದಲ್ಲಿ ಹರಿದು ಹೋದವು! ವಿಘಟನೆ ಹೊಂದುತ್ತೇವೆಯೋ ಇಲ್ಲವೋ ಎಂಬುದರ ಬಗ್ಗೆ ಅವು ಚಿಂತಿಸಲಿಲ್ಲ. "ಹಾಗಾದರೆ ಏನಾಗುವುದಿದೆ!" ಎಂಬ ಭಾವನೆ ಅವುಗಳಲ್ಲಿತ್ತು.

ದೇಹಕ್ಕೆ ಜ್ಞಾನೋದಯವನ್ನು ಉಂಟುಮಾಡುವ ಕಾರ್ಯದಲ್ಲಿ ಇದು ನಿಜವಾಗಿ ನಿರ್ಧಾರಕ ಹಂತವಾಗಿತ್ತು.

ಎಲ್ಲ ಜೀವಕೋಶಗಳು ತಮ್ಮನ್ನು ಕರಗಿಸಲು ಪ್ರಯತ್ನಿಸುವ ಹೆಡ್ಡತನದ ಶಕ್ತಿಗಿಂತ ಹೆಚ್ಚು ಸಾಮರ್ಥ್ಯಪೂರ್ಣವಾಗಿರುವ ಭಾವನೆ ತಂದುಕೊಂಡವು; 'ಮೃತ್ಯು' ಎಂದು ಕರೆಯಲಾದದ್ದನ್ನು ಕುರಿತು ಅವು ಉದಾಸೀನವಾದವು. "ನಾವು ಚಿಂತಿಸುವುದೇಕೆ? ನಾವು ಅಲ್ಲಿ ಹೋಗುತ್ತೇವೆ ಮತ್ತು ಪ್ರಜ್ಞಾಪೂರ್ವಕವಾಗಿ



ಶ್ರೀ ಅರವಿಂದರ ಕಾರ್ಯದಲ್ಲಿ ಜಗತ್ತನ್ನು ಪರಿವರ್ತನೆಗೊಳಿಸುವುದರಲ್ಲಿ ಭಾಗವಹಿಸುತ್ತೇವೆ, ಒಂದಿಲ್ಲೊಂದು ರೀತಿಯಲ್ಲಿ – ಇಲ್ಲಿ ಅಲ್ಲಿ ಹೀಗೆ ಇಲ್ಲವೆ ಹಾಗೆ – ಅದಕ್ಕೆ ಯಾವ ಮಹತ್ವವಿದೆ?"

**(ಅನುಯಾಯಿಯೊಂದಿಗೆ ಮಾತುಕತೆ, 15–7–1961)**

*

## ಮೃತ್ಯುವಿನ ನಂತರ ಸಾಗಿಹೋಗುವ ಮಾರ್ಗವನ್ನು ನಿರ್ಮಲಗೊಳಿಸುವುದು

. . . ಥಿಯೋನ್‌ನನ್ನು ಭೇಟಿ ಮಾಡುವುದಕ್ಕಿಂತ ಮೊದಲು, ಏನನ್ನಾದರೂ ಅರಿತುಕೊಳ್ಳುವುದಕ್ಕಿಂತ ಮೊದಲು ರಾತ್ರಿ ಕಾಲದಲ್ಲಿ ನನಗೆ ಅನುಭವಗಳಾಗುತ್ತಿದ್ದವು. ಕೆಲವೊಂದು ಬಗೆಯ ರಾತ್ರಿ ಕಾಲದ ಚಟುವಟಿಕೆಗಳಲ್ಲಿ ಇತ್ತೀಚೆಗೆ ದೇಹ ತ್ಯಜಿಸಿದ ಜನರ ಕಾಳಜಿವಹಿಸುವುದು ಒಂದಾಗಿತ್ತು. ಏನನ್ನು ಕೈಕೊಳ್ಳಬೇಕು ಎಂಬುದು ನನಗೆ ತಿಳಿದಿತ್ತು ಮತ್ತು ಅದನ್ನು ನಾನು ಕೈಕೊಂಡೆ. ಆಗ ನನ್ನ ವಯಸ್ಸು ಇಪ್ಪತ್ತಾಗಿತ್ತು.

ಥಿಯೋನ್‌ನ ಬೋಧನೆಗಳ ಪರಿಚಯವಾದ ನಂತರ – ಅವನನ್ನು ವೈಯಕ್ತಿಕವಾಗಿ ಭೇಟಿ ಮಾಡುವುದಕ್ಕಿಂತ ಮೊದಲು – ಅವುಗಳನ್ನೋದಿ, ನನಗೆ ಮೊದಲು ಪರಿಚಿತವಾಗಿರದ ಎಲ್ಲ ಬಗೆಯ ವಿಷಯಗಳನ್ನು ತಿಳಿದುಕೊಂಡೆ, ನಂತರ ಬಹಳ ಪದ್ಧತಿ–ಪ್ರಕಾರವಾಗಿ ಕಾರ್ಯ ಕೈಕೊಳ್ಳಲು ಪ್ರಾರಂಭಿಸಿದೆ. ಪ್ರತಿಯೊಂದು ರಾತ್ರಿ, ಅದೇ ಗಳಿಗೆಯಲ್ಲಿ, ನಾನು ಕೈಕೊಳ್ಳುತ್ತಿದ್ದ ಕಾರ್ಯ ಪಾರ್ಥಿವ (terrestrial) ಮಾತ್ರವಾದ ವಾತಾವರಣ ಮತ್ತು ಚೈತ್ಯಾತ್ಮಿಕ ವಾತಾವರಣ ಇವುಗಳ ನಡುವೆ ರಕ್ಷಣೆಯಿರುವ ಮಾರ್ಗವನ್ನು ರಚಿಸುವುದಾಗಿತ್ತು. ಆ ಮಾರ್ಗ ಪ್ರಾಣಿಕಕ್ಕೆ ಅಡ್ಡಲಾಗಿತ್ತು. ಹಾಗಾಗಿ ಜನರು ಪ್ರಾಣಿಕದ ಮೂಲಕ ಹಾದು ಹೋಗಬೇಕಾಗಿರಲಿಲ್ಲ. ಪ್ರಜ್ಞೆಯಿದ್ದ ಜನರಿಗೆ, ಆದರೆ ಅದರ ಬಗ್ಗೆ ಜ್ಞಾನವಿಲ್ಲದಿದ್ದಾಗ ಅದು ಬಹಳ ಕಠಿಣ ಸಾಗಿ ಹೋಗುವಿಕೆಯಾಗಿತ್ತು, ನರಕವಾಗಿತ್ತು. ಅದು ನರಕ. ನಾನು ಈ ಮಾರ್ಗವನ್ನು ತಯಾರಿಸುತ್ತಿದ್ದೆ – ಅದು 1903 ಇಲ್ಲವೆ 1904ರ ಸುಮಾರು ಆಗಿರಬಹುದು, ನನಗೆ ನಿಖರವಾಗಿ ನೆನಪಿನಲ್ಲಿಲ್ಲ. – ಈ ಕಾರ್ಯವನ್ನು ತಿಂಗಳಾನುಗಟ್ಟಲೆ ಕಾಲ ಕೈಕೊಂಡೆ. ಆ ಕಾಲದಲ್ಲಿ ಎಲ್ಲ ಬಗೆಯ ವಿಷಯಗಳು ಸಂಭವಿಸಿದವು, ಅವು ಅಸಾಧಾರಣವಾಗಿದ್ದವು. ಅವುಗಳನ್ನು ಕುರಿತು ನಾನು ಸುದೀರ್ಘ ಕತೆಗಳನ್ನು ಹೇಳಬಲ್ಲೆ.

ನಂತರ ನಾನು ತ್ಲೆಮ್‌ಸೆನ್(Tlemcen)ಗೆ ಹೋದಾಗ ಶ್ರೀಮತಿ ಥಿಯೋನ್‌ಳಿಗೆ

ಅದರ ಬಗ್ಗೆ ಹೇಳಿದೆ. "ಹೌದು, ನೀನು ಪೃಥ್ವಿಯ ಮೇಲೆ ಬಂದು ಕೈಕೊಳ್ಳಬೇಕಾದ ಕಾರ್ಯಗಳಲ್ಲಿ ಅದೂ ಒಂದು ಭಾಗ, ಸ್ವಲ್ಪ ಮಟ್ಟಿಗಾದರೂ ಎಚ್ಚತ್ತುಕೊಂಡ ಚೈತ್ಯಸತ್ತೆ ಇರುವ ಹಾಗೂ ನಿನ್ನ ಪ್ರಕಾಶವನ್ನು ನೋಡಬಲ್ಲ ಜನರು, ಅವರೆಲ್ಲಿಯಾದರೂ ಮರಣ ಹೊಂದಿರಲಿ, ಆ ಸಮಯದಲ್ಲಿ ನಿನ್ನ ಪ್ರಕಾಶದತ್ತ ಹೋಗುವರು ಮತ್ತು ನೀನು ಅವರಿಗೆ ಸಹಾಯ ಮಾಡುವಿ" ಎಂದು ಅವಳು ಹೇಳಿದಳು. ಇದು ಸತತ ಕೈಕೊಳ್ಳಬೇಕಾದ ಕಾರ್ಯ. ಜನರು ತಮ್ಮ ದೇಹವನ್ನು ತ್ಯಜಿಸಿ ಹೋಗುವಾಗ ಅವರಿಗೆ ಏನು ಸಂಭವಿಸುತ್ತದೆ ಎಂಬುದನ್ನು ಕುರಿತು ಅದು ನನಗೆ ಗಣನೀಯ ಅನುಭವಗಳನ್ನು ತಂದುಕೊಟ್ಟಿದೆ. ಅಲ್ಲಿ ಎಲ್ಲ ಬಗೆಯ ಉದಾಹರಣೆಗಳಿದ್ದವು. ನಿಜವಾಗಿ ಅದು ಬಹಳ ಸ್ವಾರಸ್ಯಕರವಾದದ್ದು.

**(ಸುಜಾತಾ ನಹಾರ: Mother's chronicles: Mirra, the occultist, Ch. 12)**

*

## ಪೃಥ್ವಿಗಾಗಿ ಹೊಸ ಜೀವನವೊಂದರ ಪ್ರಾರಂಭಗಳು

ನನ್ನ ಮೇಲೆ ನಾನು ಕೈಕೊಳ್ಳುತ್ತಿರುವುದು ಬಹಳ ಸ್ವಾರಸ್ಯಕರವಾಗಿದೆ, ಯಾವುದೇ ವಿಶಿಷ್ಟ ಪರಿಣಾಮ ಕಂಡುಕೊಳ್ಳುವುದಕ್ಕಾಗಿ ಆ ಕಾರ್ಯವಿರುವುದಿಲ್ಲ, ಆದರೆ ಇಡೀ ಪೃಥ್ವಿಗಾಗಿ ತೆರೆದುಕೊಳ್ಳುತ್ತಿರುವ ಸಾಧ್ಯತೆಯನ್ನು ಕುರಿತು ಆ ಕಾರ್ಯವಿದೆ. ಅದೊಂದು ಹೊಸ ವಿಧಾನವಾಗಿದ್ದು ನನ್ನನ್ನು ಆಧಾರ–ವಾಗಿರಿಸಿಕೊಂಡು ನನ್ನ ದೇಹದಿಂದ ಹೊರಗೆ ವಿಸ್ತರಿಸುತ್ತ ಹೋಗುತ್ತದೆ, ಅಲ್ಲಿ ನಾನು ಹೊಸ ಪ್ರಜ್ಞೆಗೆ ತೆರೆದಿರಿಸಿಕೊಳ್ಳಲು ತಯಾರಾಗಿರುವವರಿಗಾಗಿ, ದೇಹದ ಪರಿವರ್ತನೆಯನ್ನು ಅಭೀಪ್ಸೆಪಡುವವರಿಗಾಗಿ ಈ ಭೌತದ್ರವ್ಯವನ್ನು ಅತಿಮಾನಸ ದ್ರವ್ಯದಿಂದ ತುಂಬಲು ಶಕ್ತಳಾಗಿದ್ದೆ. ನಾನು ನನ್ನ ಮೇಲೆ ಕೈಕೊಂಡ ಕಾರ್ಯದಿಂದಾಗಿ ಅವರಿಗೆ ಕಾರ್ಯಭಾರ ಕಡಿಮೆಯಾಗುತ್ತದೆ, ಅವರ ಹಲವಾರು ತೊಂದರೆಗಳನ್ನು ತೆಗೆದು ಹಾಕಲಾಗುತ್ತದೆ. ನಾನು ಬೆಂಬತ್ತಿರುವುದರಲ್ಲಿ ಹಾಗೂ ನನ್ನ ಮೇಲೆ ಕೈಕೊಳ್ಳುತ್ತಿರುವ ಕಾರ್ಯದಲ್ಲಿ ಅಸಾಧಾರಣ ಅರ್ಥವನ್ನು ಕಂಡುಕೊಳ್ಳುತ್ತಿದ್ದೇನೆ. ಅದೊಂದು ಹೊಸ ಅನುಭವ, ಪ್ರಾರಂಭವಾದ ಹೊಸ ಜೀವನ, ಅದರೊಂದಿಗೆ ಸಾಧ್ಯತೆಗಳು ಮುಂದುವರಿದುಕೊಂಡು ಹೋಗುತ್ತಲೇ ಇರುತ್ತವೆ ಮತ್ತು ಅಸ್ತಿತ್ವದ ಸತ್ಯದತ್ತ ವಿಸ್ತರಿಸಿಕೊಳ್ಳುತ್ತವೆ.

**(The Supreme: p. 30)** – **ಶ್ರೀಮಾತೆ**

*





ಮೃತ್ಯು ಪರಿವರ್ತನೆಗೆ ಒಳಗಾಗಿ ಅಮರತ್ವವಿರುವ ದಿವ್ಯಜೀವನವಾಗುತ್ತದೆ, ಕ್ರೌರ್ಯ ರೂಪಪರಿವರ್ತನೆಗೆ ಒಳಗಾಗಿ ದೈವೀ ಪ್ರೇಮವಾಗುತ್ತದೆ, ಅದು ಸಹಿಸಿಕೊಳ್ಳಲು ಅಸಾಧ್ಯವಾದ ದಿವ್ಯಾನಂದವಾಗಿರುತ್ತದೆ. ಅಜ್ಞಾನ ರೂಪ ಪರಿವರ್ತನೆಗೆ ಒಳಗಾಗಿ ದೈವೀ ಪ್ರಕಾಶವಾಗುತ್ತದೆ, ಅದು ವಿವೇಕ ಮತ್ತು ಜ್ಞಾನಗಳಾಚೆಗೆ ನೆಗೆತ ಮಾಡುತ್ತದೆ.

**(ಚಿಂತನಗಳು ಹಾಗೂ ಸೂಕ್ತಿಗಳು)** – **ಶ್ರೀ ಅರವಿಂದರು**

**(CWM, 10/164-165)** – **ಶ್ರೀಮಾತೆ**

*

## ಎಂದೆಂದಿಗೂ ಇರುವ ದೈವೀ ಸಾನ್ನಿಧ್ಯ

### ಶ್ರೀ ಅರವಿಂದರು ಮೃತರಾದರು ಎಂದು ಹೇಳುವುದು ಅಜ್ಞಾನದಿಂದಾಗಿ

ಅಲ್ಲಿ ಶ್ರೀ ಅರವಿಂದರನ್ನು ಕುರಿತು ವಿಷಯವಿತ್ತು. "ಅವರು ಮೃತರಾಗಿದ್ದಾರೆ" ಎಂದು ವೈದ್ಯರು ನಿರ್ಧರಿಸಿದರು. – ಅವರು ಪರಿಪೂರ್ಣವಾಗಿ ಜೀವಿಸಿದ್ದರು. ಮತ್ತು ಐದು ದಿನಗಳಾದ ನಂತರವೂ, ಅವರನ್ನು ಸಮಾಧಿ ಸ್ಥಳದಲ್ಲಿ ಇರಿಸಿದಾಗ ಕೂಡ ಅವರು ಜೀವಿಸಿದ್ದರು. ಬಾಹ್ಯ ಜಗತ್ತಿನ ಒತ್ತಡದಿಂದಾಗಿ ಅವರನ್ನು ಅಲ್ಲಿ ಇರಿಸಬೇಕಾಯಿತು ಮತ್ತು ಅವರನ್ನು ರಕ್ಷಿಸಿಕೊಂಡು ಬರುವುದು ಅಸಾಧ್ಯವಾಗಿತ್ತು.

ನಾವು ಒಪ್ಪಿಕೊಳ್ಳಬೇಕಾಯಿತು. ಅವರು ಮೃತರಾಗಿದ್ದರೆಂದು ನಾನು ಹೇಳಲಾರೆ. ಅವರು ಮೃತರಾಗಿರಲೇ ಇಲ್ಲ, ಅದು ಪರಿಪೂರ್ಣವಾಗಿ ಸ್ಪಷ್ಟವಾಗಿತ್ತು. ದೇಹ ಅದಾಗಲೆ ಸ್ವಲ್ಪ ಸ್ವಲ್ಪವಾಗಿ ಐದನೆಯ ದಿನದ ಕೊನೆಯ ಭಾಗದಲ್ಲಿ ತನ್ನ ಬಣ್ಣ ಕಳೆದುಕೊಳ್ಳತೊಡಗಿತ್ತು, ಆದರೆ... (ಶ್ರೀಮಾತೆಯವರು ದಿವ್ಯ ಇಂಗಿತ ಸೂಚನೆಯನ್ನು ಮಾಡುತ್ತಾರೆ).

ಮೊದಲಿನ ಮೂರು ದಿನಗಳ ಕಾಲ ನಾನು ಅವರ ಹಾಸಿಗೆ ಬಳಿ ನಿಂತುಕೊಂಡಿದ್ದೆ. ಅವರ ದೇಹದಲ್ಲಿ ಸಂಘಟಿತವಾದ ಎಲ್ಲ ಪ್ರಜ್ಞೆ ಉದ್ದೇಶಪೂರ್ವಕವಾಗಿ ಹೊರ ಹರಿದು ಬಂದು ನನ್ನೊಳಗೆ ಸೇರಿದ್ದನ್ನು ನಾನು ನೋಡಿದೆ. ನಾನು ಅದನ್ನು ನೋಡಿದೆನಷ್ಟೇ ಅಲ್ಲ, ಅದು ಪ್ರವೇಶಿಸುವಾಗ ಉಂಟಾದ ಘರ್ಷಣೆಯನ್ನು ಭಾವನೆಗೆ ತಂದುಕೊಂಡೆ.

ಆಗ ಜನರು ಹೇಳಿದರು "ಅವರು ಮೃತರಾಗಿದ್ದಾರೆ" ಎಂದು ಅದು ಅಜ್ಞಾನ.

**(ಅನುಯಾಯಿಯೊಂದಿಗೆ ಮಾತುಕತೆ: 14–6–1962) – ಶ್ರೀಮಾತೆ**

*

## ಶ್ರೀ ಅರವಿಂದರು ಮೊದಲಿದ್ದ ಹಾಗೆಯೇ ಇದ್ದಾರೆ

ಶ್ರೀ ಅರವಿಂದರು ಸ್ವತಃ ಮೊದಲಿದ್ದ ಹಾಗೆಯೇ ಇದ್ದಾರೆ, ರೂಪದ ಸಾಮರಸ್ಯದೊಂದಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿದ್ದಾರೆ. ಎದೆಯಿರುವ ಸ್ಥಳ ವಿಶಾಲವಾಗಿದೆ, ಗಟ್ಟಿಮುಟ್ಟಾಗಿದೆ ಮತ್ತು ಬಹಳ ಚಟುವಟಿಕೆಯಿಂದ ಇದ್ದಾರೆ, ಬರುತ್ತಾರೆ, ಹೋಗುತ್ತಾರೆ, ಕುಳಿತುಕೊಳ್ಳುತ್ತಾರೆ. ಮೇಲಕ್ಕೆದ್ದೇಳುತ್ತಾರೆ, ಇದೆಲ್ಲವನ್ನೂ ಶ್ರೇಷ್ಠ ಗಾಂಭೀರ್ಯದಿಂದ ಕೈಕೊಳ್ಳುತ್ತಾರೆ. ಅವರ ಬಣ್ಣ ಹೊಂಬಣ್ಣ ಹಾಗೂ ಕಂಚುಬಣ್ಣಗಳಿಂದ ಮಿಶ್ರಿತಗೊಂಡದ್ದಾಗಿದೆ, ಅದು ಅವರ ಅತಿಮಾನಸ ಹೊಂಬಣ್ಣ ಮತ್ತು ಅವರ ಅತಿಮಾನಸ ಸತ್ತೆ ಇವೆರಡೂ ಘನೀಕರಣಗೊಂಡ ಹಾಗಿದೆ. ಅವರು ತೋರಿಬರುವುದನ್ನು ರೂಪಿಸಲು ಅದು ಕೇಂದ್ರೀಕರಣಗೊಂಡ ಹಾಗೂ ಘನೀಕರಣಗೊಂಡ ಹಾಗಿದೆ. ಅದು ಪ್ರಕಾಶವನ್ನು ಪ್ರತಿಫಲಿಸುವುದಿಲ್ಲ: ಅದು ಅಂತರಂಗದಲ್ಲಿ ಪ್ರಕಾಶಿತವಾಗಿದೆ ಎನ್ನುವ ರೀತಿಯಲ್ಲಿದೆ. ಆದರೆ ಅದನ್ನು ಹೊರಸೂಸುವುದಿಲ್ಲ, ಮತ್ತು ಅದು ನೆರಳನ್ನು ಚೆಲ್ಲಿಕೊಡುವುದಿಲ್ಲ. ಆದರೆ ಪರಿಪೂರ್ಣವಾಗಿ ಸ್ವಾಭಾವಿಕವಾಗಿದೆ, ಅದು ನಿಮಗೆ ಆಶ್ಚರ್ಯವನ್ನುಂಟು ಮಾಡುವುದಿಲ್ಲ, ಅದು ಜಗತ್ತಿನಲ್ಲಿ ಅತ್ಯಂತ ಸ್ವಾಭಾವಿಕವಾದದ್ದಾಗಿದೆ: ಅವರಿರುವ



ರೀತಿ ಹಾಗಿದೆ. ವಯಸ್ಸಾಗದಂತೆ ಇರುವಂತಹದು (ageless), ಅವರ ಕೂದಲಿಗೆ ಅವರ ದೇಹದ ಬಣ್ಣವೇ ಇದೆ. ಅವರಿಗೆ ಕೂದಲುಗಳಿವೆ, ಆದರೆ ಅವು ಕೂದಲುಗಳು ಎಂದು ನೀವು ಹೇಳಲಾರಿರಿ, ಅವುಗಳ ಬಣ್ಣ ಅದೇ ಆಗಿದೆ; ಕಣ್ಣುಗಳೂ ಕೂಡ, ಅವುಗಳಲ್ಲಿ ಹೊಂಬಣ್ಣದ ನೋಟವಿದೆ. ಆದಾಗ್ಯೂ ಅದು ಪರಿಪೂರ್ಣವಾಗಿ ಸ್ವಾಭಾವಿಕವಾಗಿದೆ, ಆಶ್ಚರ್ಯಪಡುವಂತಹದೇನೂ ಇಲ್ಲ. ಅವರು ಮೊದಲು ಕುಳಿತುಕೊಳ್ಳುತ್ತಿದ್ದ ರೀತಿಯಲ್ಲಿ ಕುಳಿತುಕೊಳ್ಳುತ್ತಾರೆ, ಕಾಲುಗಳನ್ನು ಮೊದಲು ಇರಿಸುತ್ತಿದ್ದ ರೀತಿಯಲ್ಲಿ ಇರಿಸುತ್ತಾರೆ (ಬಲಗಾಲು ಮುಂದೆ) ಮತ್ತು ಅದೇ ಕಾಲಕ್ಕೆ ಅವರು ಮೇಲಕ್ಕೆದ್ದಾಗ ಚಟುವಟಿಕೆಯಿಂದಿರುತ್ತಾರೆ, ಅವರು ಬರುತ್ತಾರೆ ಮತ್ತು ಹೋಗುತ್ತಾರೆ.

**(ಅನುಯಾಯಿಯೊಂದಿಗೆ ಮಾತುಕತೆ, 29–6–1963) – ಶ್ರೀಮಾತೆ**

*

## ಶ್ರೀ ಅರವಿಂದರು ಈಗ ಕ್ರಿಯೆಗಾಗಿ ಹೆಚ್ಚಿನ ಸಾಮರ್ಥ್ಯ ಹೊಂದಿದ್ದಾರೆ

**ಪ್ರಶ್ನೆ :** *ಶ್ರೀ ಅರವಿಂದರನ್ನು ಕುರಿತು ನನಗೆ ನಾನೇ ಒಂದು ಪ್ರಶ್ನೆ ಕೇಳಿಕೊಂಡೆ: ದೇಹ ತ್ಯಜಿಸುವಾಗ ಅವರು ಯಾವ ಹಂತವನ್ನು ತಲುಪಿದ್ದರು, ಪರಿವರ್ತನೆಯ ಯಾವ ಹಂತದಲ್ಲಿದ್ದರು? ಉದಾಹರಣೆಗೆ, ಶ್ರೀಮಾತೆಯವರೆ, ನೀವು ಈಗ ಕೈಕೊಳ್ಳುತ್ತಿರುವ ಕಾರ್ಯ ಹಾಗೂ ಶ್ರೀ ಅರವಿಂದರು ಆ ಕಾಲದಲ್ಲಿ ಕೈಕೊಂಡಿದ್ದ ಕಾರ್ಯ ಇವುಗಳ ನಡುವಿರುವ ವ್ಯತ್ಯಾಸವೇನು?*

**ಶ್ರೀಮಾತೆ :** ಅವರು ತಮ್ಮ ದೇಹದಲ್ಲಿ ಅತಿಮಾನಸ ಶಕ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಿದ್ದರು. ಮತ್ತು ಅವರು ದೇಹ ತ್ಯಜಿಸುವ ಸಮಯದಲ್ಲಿ ನಾನು ಅವರ ಹಾಸಿಗೆಯ ಬಳಿ ನಿಂತಿದ್ದೆ. ಒಟ್ಟಿನಲ್ಲಿ ಬಹಳ ಮೂರ್ತರೂಪದ್ದೆನಿಸುವ ರೀತಿಯಲ್ಲಿ – ಎಷ್ಟೊಂದು ಬಲವತ್ತರವಾದ ಅದರ ಸಂವೇದನೆ ಇತ್ತೆಂದರೆ ಅದನ್ನು ನೋಡಬಹುದೇನೋ ಎನಿಸುವ ಹಾಗಿತ್ತು. – ಅವರಲ್ಲಿದ್ದ ಈ ಎಲ್ಲ ಅತಿಮಾನಸ ಶಕ್ತಿ ಅವರ ದೇಹದಿಂದ ನನ್ನ ದೇಹದಲ್ಲಿ ಸಾಗಿ ಬಂದಿತು. ಅದು ಸಾಗಿ ಬರುತ್ತಿರುವಾಗ ಉಂಟಾದ ಘರ್ಷಣೆಯನ್ನು ನಾನು ಭಾವನೆಗೆ ತಂದುಕೊಂಡೆ. ಅದು ಅಸಾಧಾರಣವಾಗಿತ್ತು. ಅದು ಅಸಾಧಾರಣವಾದ ಅನುಭವವಾಗಿತ್ತು. ಅದು ಬಹಳ ದೀರ್ಘಕಾಲ ನಡೆಯಿತು. (ಶ್ರೀಮಾತೆಯವರು ಶಕ್ತಿ ತಮ್ಮೊಳಗೆ ಪ್ರವೇಶಿಸುತ್ತಿದ್ದುದರ ಸಂಕೇತ ಮಾಡಿ ತೋರಿಸುತ್ತಾರೆ.) ನಾನು ಅವರ ಹಾಸಿಗೆ

ಬಳಿ ನಿಂತಿದ್ದೆ, ಅದು ಮುಂದುವರಿಯುತ್ತ ಹೋಯಿತು. ಅದು ಬಹುಮಟ್ಟಿಗೆ ಭೌತಿಕ ರೂಪದ ಸಂವೇದನೆಯಾಗಿತ್ತು.

ಅದು ದೀರ್ಘಕಾಲ ತೆಗೆದುಕೊಂಡಿತು.

*

**ಪ್ರಶ್ನೆ :** *ನಾನು ತಿಳಿದುಕೊಳ್ಳಬೇಕಾದುದು ಏನೆಂದರೆ ಆಂತರಿಕ ಕಾರ್ಯ ಯಾವ ಹಂತದಲ್ಲಿತ್ತು, ಉದಾಹರಣೆಗೆ ಅವಚೇತನವನ್ನು ನಿರ್ಮಲಗೊಳಿಸುವ ಕಾರ್ಯ ಮತ್ತು ಅಂತಹದೆಲ್ಲವೂ, ಅವರು ಆ ಕಾಲದಲ್ಲಿ ಕೈಕೊಂಡ ಕಾರ್ಯ ಮತ್ತು ನೀವು ಈಗ ತಲುಪಿರುವ ಕಾರ್ಯದ ಹಂತ ಇವುಗಳ ನಡುವೆ ಯಾವ ವ್ಯತ್ಯಾಸವಿದೆ? ಅವಚೇತನ ಈಗ ಕಡಿಮೆ ಅವಚೇತನದ್ದಾಗಿದೆಯೆ?*

**ಶ್ರೀಮಾತೆ :** ಓಹ್, ಹೌದು. ನಿಶ್ಚಿತವಾಗಿ.

... ಈಗ ಕ್ರಿಯೆಗಾಗಿ ಇರುವ ಸಾಮರ್ಥ್ಯದಲ್ಲಿ ವ್ಯತ್ಯಾಸವಿದೆ. ಶ್ರೀ ಅರವಿಂದರೇ ಸ್ವತಃ ದೇಹದಲ್ಲಿ ಇದ್ದಾಗಿನಗಿಂತ ಕ್ರಿಯೆಗಾಗಿ ಹೆಚ್ಚಿನ ಸಾಮರ್ಥ್ಯ ಹೊಂದಿದ್ದಾರೆ. ಅದಕ್ಕಾಗಿಯೇ ಅವರು ದೇಹ ತ್ಯಜಿಸಿ ಹೋದರು, ಏಕೆಂದರೆ ಆ ರೀತಿಯಲ್ಲಿ ಕಾರ್ಯ ಕೈಕೊಳ್ಳಲು ಅದು ಅವಶ್ಯವಾಗಿತ್ತು.

ಅದು ಬಹಳ ಮೂರ್ತರೂಪದ್ದು. ಅವರ ಕ್ರಿಯೆ ಬಹಳ ಮೂರ್ತ–ರೂಪದ್ದಾಗಿದೆ. ಸ್ಪಷ್ಟವಾಗಿ ಅದು ಮಾನಸಿಕವಾದ ಏನೋ ಒಂದಲ್ಲ. ಅದು ಇನ್ನೊಂದು ಪ್ರಾಂತದಿಂದ ಬರುತ್ತದೆ. ಅದು ಗಾಳಿಯಂತಿರುವುದಲ್ಲ, ... ಮೂರ್ತಸ್ವರೂಪದ್ದು. ಮನುಷ್ಯ ಅದು ಬಹುಮಟ್ಟಿಗೆ ಭೌತಿಕ ರೂಪದ್ದಾಗಿದೆ ಎಂದು ಹೇಳಬಲ್ಲ.

**(CWM, 11/328–29)** – **ಶ್ರೀಮಾತೆ**

*

**ಶ್ರೀ ಅರವಿಂದರ ಸಾನ್ನಿಧ್ಯ ಅವರ ಕೋಣೆಯಲ್ಲಿ ಬಹಳ ಸಮರ್ಥಪೂರ್ಣ–ವಾಗಿರುವುದು ಕಂಡುಬರುತ್ತದೆ**

ಅಲ್ಲಿ ದೈವೀ ಸತ್ಯದ ಪ್ರಕಟಣೆ ಇದೆ. ಅವರ ಕೋಣೆಯ ಮುಂದೆ ನಿಂತಾಗ ಪರಿಪೂರ್ಣ ಪ್ರಜ್ಞೆಯನ್ನು ಗ್ರಹಿಸಬಹುದು. ತನ್ನನ್ನು ಹೇಗೆ ತೆರೆದಿರಿಸಿಕೊಳ್ಳ–ಬೇಕೆಂಬುದನ್ನು ಅರಿತುಕೊಂಡ ಮನುಷ್ಯ, ನಿಜವಾಗಿ ತನ್ನನ್ನು ವಿಸ್ತಾರವಾಗಿ, ಸ್ವಯಂಪ್ರೇರಣೆಯಿಂದ ತೆರೆದುಕೊಂಡಾಗ ಪ್ರತಿಯೊಂದಕ್ಕಾಗಿ ಅವರ ಸಹಾಯ–ವಿರುತ್ತದೆ. ಅದು ನಂಬಲು ಅಸಾಧ್ಯವೆನಿಸುವ ರೀತಿಯಲ್ಲಿದೆ. ಅದು ಅಜೇಯವಾದದ್ದು! ಸರ್ವ ಸಾಮರ್ಥ್ಯಪೂರ್ಣವಾದದ್ದು! ನಟನೆ ಮಾಡುವುದು ಬೇಡ. ಅವರ ದೈವೀ ದಿವ್ಯಾನಂದದ ಭಾವನೆ ತಂದುಕೊಳ್ಳಲು ಮನುಷ್ಯ ಅವರೆದುರಿಗೆ ಸರಳನಾಗಿರಬೇಕು, ಆತ್ಮಸಾಕ್ಷಿಗನುಗುಣವಾಗಿ ಬಿಚ್ಚು ಮನಸ್ಸಿನವನಾಗಿರಬೇಕು. ನಿಷ್ಕಪಟನಾಗಿರಬೇಕು ಮತ್ತು ತನ್ನನ್ನು ಸರಳವಾಗಿ ತೆರೆದಿರಿಸಿಕೊಂಡಿರಬೇಕು, ಅದರಿಂದಾಗಿ ಅವರ ದಿವ್ಯಾನಂದವನ್ನು ಭಾವನೆಗೆ ತಂದುಕೊಳ್ಳಲು ಸಾಧ್ಯವಾಗುವುದು.



ಅವರ ದೈವೀ ನೈಜತೆಯ ಸಾಮರ್ಥ್ಯ ಅಸಾಧಾರಣವಾದದ್ದು. ಅವರು ತಮ್ಮನ್ನು ಇಡಿಯಾಗಿ ತೆರೆದು ತೋರಿಸಿದರೆ ಅವರೆದುರು ನಿಲ್ಲಲು ಯಾರಿಗೂ ಸಾಧ್ಯವಾಗುವುದಿಲ್ಲ. ಹಾಗಾಗಿ ನಾನು ನಿನಗೆ ಮುನ್ನೆಚ್ಚರಿಕೆಯನ್ನು ನೀಡಿದ್ದೆ. ಅವರ ಕೋಣೆಯ ಮುಂದೆ ನಿಲ್ಲಲು ಅನುಮತಿ ಪಡೆದ ಜನರ ಕೇವಲ ಹೊರರೂಪ ನಿನ್ನಲ್ಲಿ ಇರದಂತೆ ನೋಡಿಕೋ. ಅದು ಅವರ ದೈವೀ ಸಾಮರ್ಥ್ಯದಿಂದ ಕಂಪಿಸುತ್ತದೆ. ಸಂತೋಷದಿಂದಿರು, ಇಲ್ಲಿ ಕೆಳಗೆ ಅವರ ಕಾರ್ಯಕ್ಕೆ ನಿನ್ನನ್ನು ಮುಡುಪಾಗಿರಿಸಿಕೋ. ಅದು ಅಪರೂಪಕ್ಕೆ ದೊರಕುವ ಅವಕಾಶ. ಅದಕ್ಕೆ ಯೋಗ್ಯನಾಗಿರು. ವೇಳೆಯನ್ನು ಹಾಳು ಮಾಡಬೇಡ.

(ಮೌನ)

ಎಷ್ಟೊಂದು ಅದ್ಭುತವಾದದ್ದು! ಅದೆಂತಹ ದೈವೀ ಸಾಮರ್ಥ್ಯ! ಅದೆಂತಹ ಮಹಿಮೆ! ನಮ್ಮೊಂದಿಗಿದ್ದ ಅವರ ದೈವೀ ಶಕ್ತಿ ಇನ್ನೂ ಅವರ ಕೋಣೆಯಲ್ಲಿ ಕಂಪಿಸುತ್ತಿದೆ. ಅದು ಧ್ಯಾನಕ್ಕೆ ಯೋಗ್ಯವಾದ ಹಾಗೂ ದೈವೀ ಸತ್ಯದ ದೈವೀ ಕಂಪನಗಳನ್ನು ಸ್ವೀಕರಿಸಬಹುದಾದ ಸ್ಥಳ. ಅದು ತುಂಬಿಕೊಂಡಿದೆ. ನಿಷ್ಕಪಟನಾದ ಮನುಷ್ಯನಿಗೆ ಸ್ಪರ್ಶವೇದ್ಯವಾಗುವಂತೆ ಅದರ ಭಾವನೆ ಬರುತ್ತದೆ.

**(Blessings of the Grace: 109–110)** – **ಶ್ರೀಮಾತೆ**

*

**ಸಮಾಧಿಯ ಬಳಿ ಶ್ರೀ ಅರವಿಂದರ ಸನಾತನ ದೈವೀ ಸಾನ್ನಿಧ್ಯ**

ನೀವು ತೊಂದರೆಯಲ್ಲಿದ್ದಾಗ, ಅದರ ನಿವಾರಣೆಗೆ ಉತ್ತರ ಬೇಕಾಗಿದ್ದರೆ, ಅಂತಹದೇನೇ ಇರಲಿ, ಇಲ್ಲವೆ ನಿಮಗೆ ಆರಾಮ ಇಲ್ಲದಾಗಿದೆ ಎನಿಸಿದಾಗ, ಇಲ್ಲವೆ

ಏನೋ ಒಂದು ನಿಮ್ಮನ್ನು ಪೀಡಿಸುತ್ತಿದ್ದಾಗ, ಇಲ್ಲವೆ ನಿಮಗೆ ಕಿರಿಕಿರಿಯನ್ನುಂಟು ಮಾಡುವ ತಪ್ಪೊಂದನ್ನು ಎಸಗಿದ್ದಾಗ – ಸಿಟ್ಟಿಗೆದ್ದಾಗ ಮತ್ತು ಅತೃಪ್ತಿಯಿಂದಿದ್ದಾಗ, ಅದು ಬಹಳ ಕ್ಷುಲ್ಲಕವಾಗಿರಬಹುದು, ಅತ್ಯಂತ ಸಾದಾ ರೀತಿಯದು ಹಾಗೂ ಯಾವ ಮೌಲ್ಯವಿಲ್ಲದ್ದು ಆಗಿರಬಹುದು, ಕಾರಣ ಏನಿರಬಹುದು ಎಂಬುದು ತಿಳಿಯದೇ ಇದ್ದ ವಿಷಯಗಳಾಗಿರಬಹುದು, ಹೀಗೆ ಏನೋ ಒಂದು ಸರಿಯಾಗಿರದೇ ಇದ್ದಾಗ, ಅದು ಹೇಗಿರಬೇಕೋ ಹಾಗಿರದೇ ಇದ್ದಾಗ – ಈ ಕೆಲಮಟ್ಟಿಗೆ ಅಸಂತೋಷಕರವಾಗಿರುವ ವಿಷಯವನ್ನು ತೊಡೆದು ಹಾಕಬೇಕೆಂದಿದ್ದಾಗ, ನೇರವಾಗಿ ಸಮಾಧಿಯ ಬಳಿ ಬರಬೇಕು. ಮತ್ತು ಬಿಚ್ಚುಮನಸ್ಸಿನಿಂದ ಶ್ರೀ ಅರವಿಂದರ ಹತ್ತಿರ ಮಾತನಾಡಿರಿ, ಯಾವ ಸಂಶಯವನ್ನೂ ಇಟ್ಟುಕೊಳ್ಳಬೇಡಿರಿ, ಹಿಂದು ಮುಂದು ನೋಡದೆ ಎಲ್ಲವನ್ನೂ ಹೇಳಿರಿ, ಅದು ನೀವು ನನ್ನ ಬಳಿ ಬಂದು ಹೇಳುತ್ತಿರುವ ಹಾಗಿರಬೇಕು. – ನೀವು ಬಹಳಷ್ಟು ಸಲ ಕಂಡುಕೊಂಡ ಹಾಗೆ ನಿಮ್ಮ ತೊಂದರೆಗಳು ಒಮ್ಮೆಗೆ ಮಾಯವಾಗಿದ್ದವು, ನೀವು ನನ್ನ ಹತ್ತಿರ ಮಾತನಾಡಿದಾಗ ಅವು ಹೊರಟು ಹೋಗಿದ್ದವು....

ಅದೇ ರೀತಿಯಲ್ಲಿ ನೀವು ಶ್ರೀ ಅರವಿಂದರಿಗೆ ಹೇಳಬೇಕು, ಈ ರೀತಿಯಲ್ಲಿ (ಶ್ರೀಮಾತೆಯವರು ತಲೆಯನ್ನು ಬಾಗಿಸಿ ತೋರಿಸುತ್ತಾರೆ) ಸಮಾಧಿಯ ಮೇಲೆ ನಿಮ್ಮ ತಲೆಯನ್ನು ಇರಿಸಬೇಕು ಮತ್ತು ನಿಮ್ಮ ತೊಂದರೆಗಳನ್ನು ನಿವಾರಿಸಿರೆಂದು ಕೇಳಿಕೊಳ್ಳಬೇಕು. ಇಲ್ಲವೆ ನೀವು ಪ್ರಾರ್ಥನೆಯೊಂದನ್ನು (ಶ್ರೀಮಾತೆಯವರು ತಮ್ಮ ಕೈಯಿಂದ ಹೃದಯದ ಭಾಗದಿಂದ ಮೇಲ್ಗಡೆಗೆ ಹೋಗುವ ಸನ್ನೆ ಮಾಡಿ ತೋರಿಸುತ್ತಾರೆ) ಹೀಗೆ ಅವರಿಗೆ ಮಾಡಿಕೊಳ್ಳಬೇಕು. ಮತ್ತು ಏಕಾಗ್ರತೆಯನ್ನು ನಿಮ್ಮ ಸತ್ತೆಯ ಆಳದತ್ತ ತರಬೇಕು. ಅವರು ನಿಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಳ್ಳುತ್ತಾರೆ ಎಂಬುದರಲ್ಲಿ ನನಗೆ ಸಂಶಯವಿಲ್ಲ ಮತ್ತು ಅವರು ನಿಮಗೆ ಉತ್ತರ ನೀಡುತ್ತಾರೆ. ಯಾವುದೇ ಸಂಶಯವಿಲ್ಲದೆ ನೀವು ಅವರಿಗೆ ಸುಲಭವಾಗಿ ನಿವೇದಿಸಬಹುದು. ಅವರೊಡನೆ ಸಂಪರ್ಕ ಬೆಳೆಸಿಕೊಂಡು ತಮಗೆ ಉತ್ತರ ದೊರಕಿಸುವ ಅನೇಕ ಜನರಿದ್ದಾರೆ. ಈಗ ಅವರು ನಮಗೆ ಸುಲಭಲಭ್ಯರಾಗಿದ್ದಾರೆ ಮತ್ತು ಹೆಚ್ಚು ಕ್ರಿಯಾಶೀಲರಾಗಿದ್ದಾರೆ. ಈ ರೀತಿಯಲ್ಲಿ ನೀವು ಬಹಳ ಕಾಲ ಕಾದುಕೊಂಡಿರಬೇಕಾಗಿರುವುದಿಲ್ಲ.



ಆದರೆ ಈ ವಿಧಾನ ಅನುಕೂಲಕರವಾಗಿದೆ, ಮತ್ತು ಹೆಚ್ಚು ನೇರವಾಗಿದೆ, ಹೆಚ್ಚು ಸುಲಭಲಭ್ಯವಾಗಿದೆ. ಯಾವುದೇ ಸಮಯದಲ್ಲಿ ಪ್ರಶ್ನೆ ಕೇಳಬಹುದು. ಸಮಾಧಿ ಬಳಿ ಬಂದು ನೀವು ಉತ್ತರ ಪಡೆಯಬಹುದು.

*

## ಈಗ ಪ್ರತಿಯೊಬ್ಬನಿಗೆ ಅವರು ಸುಲಭಲಭ್ಯರಾಗಿದ್ದಾರೆ

ಏನೋ ಒಂದು ಸರಿಯಾದ ರೀತಿಯದು ಆಗಿರದಿದ್ದರೆ ಮತ್ತು ನೀವು ಅದಕ್ಕೆ ಕಾರಣವೊಂದನ್ನು ಹುಡುಕುತ್ತಿದ್ದರೆ ಇಲ್ಲವೆ ನೀವು ದೌರ್ಬಲ್ಯವೊಂದರ ಮೇಲೆ ಜಯ ಸಾಧಿಸಲು ಬಯಸುತ್ತಿದ್ದರೆ, ಪರಿಶುದ್ಧಗೊಳ್ಳಲು ಒಂದು ತೊಂದರೆಯನ್ನು ನಿವಾರಿಸಬೇಕಾಗಿದ್ದರೆ – ಯಾವುದೇ ವಿಷಯಕ್ಕೆ ಉತ್ತರ ಪಡೆಯಬೇಕಾಗಿದ್ದರೆ ಸಮಾಧಿ ಬಳಿ ಬಂದು ಶ್ರೀ ಅರವಿಂದರನ್ನು ಕೇಳಿರಿ, ನೀವು ಉತ್ತರ ದೊರಕಿಸುವಿರಿ. ಕೇವಲ ಉತ್ತರವನ್ನಷ್ಟೇ ಅಲ್ಲ, ಆದರೆ ಅವರ ಆಶೀರ್ವಾದಗಳನ್ನೂ ಕೂಡ, ಅವರ ಕರುಣೆ, ಅವರ ಶಾಂತಿ ಹಾಗೂ ಜ್ಞಾನೋದಯ ಇವೆಲ್ಲವನ್ನು ದೊರಕಿಸುವಿರಿ. ಸರ್ವಸಮರ್ಥವಾದ ಅವರ ಪ್ರೇಮ ನಿಮ್ಮನ್ನು ಹಿಡಿದುಕೊಳ್ಳುತ್ತದೆ ಮತ್ತು ನೀವು ಅದರಲ್ಲಿ ಧುಮುಕುತ್ತೀರಿ. ಒಮ್ಮೆ ನೀವು ಅವರಲ್ಲಿ ನಿಮ್ಮನ್ನು ಬಿಟ್ಟುಕೊಟ್ಟಾಗ ಎಲ್ಲ ಅನಾಹುತಗಳ ವಿರುದ್ಧ ರಕ್ಷಣೆ ಪಡೆಯುವಿರಿ. ಅವರ ದೈವೀ ಪ್ರಭಾವ ಇರುವ ರೀತಿ ಹೀಗಿದೆ. ಸರಳ, ನಿಷ್ಕಪಟ ಹಾಗೂ ವಿನಮ್ರರು ಆಗಿರುವ ಎಲ್ಲರಿಗೆ ಅವರು ತಮ್ಮನ್ನು ತೆರೆದು ತೋರಿಸುತ್ತಾರೆ. ಅವರು ಅಲ್ಲಿದ್ದಾರೆ ಪರಿಪೂರ್ಣವಾಗಿ ಪ್ರಜ್ಞಾವಂತರಾಗಿದ್ದಾರೆ ಮತ್ತು ಅವರು ಜಗತ್ತಿನ ಎಲ್ಲ ಚಟುವಟಿಕೆಗಳಿಗೆ ನಿರ್ದೇಶನ ನೀಡುತ್ತಾರೆ.

ಅವರು ತಮ್ಮ ದೇಹದಲ್ಲಿದ್ದಾಗ ಜನರು ಏನು ಹೇಳುತ್ತಿದ್ದರು ಎಂಬುದು ನಿಮಗೆ ತಿಳಿದಿರಬಹುದು; ಅವರು ಬಹಳ ದೂರದಲ್ಲಿದ್ದಾರೆ, ಸುಲಭಲಭ್ಯ–ರಾಗುವವರಲ್ಲ ಮತ್ತು ಇಲ್ಲಿರುವ ಸಾಧಕರ ಆಗು–ಹೋಗುಗಳನ್ನು ಕುರಿತು ಸಂಬಂಧವನ್ನಿರಿಸಿಕೊಂಡಿಲ್ಲ ಇತ್ಯಾದಿ. ಅದು ಪೂರ್ತಿ ಸರಿಯಾದದ್ದಲ್ಲ. ಏಕೆಂದರೆ, ನಿಜವಾಗಿ, ಅವರು ಜಗತ್ತನ್ನು ಉದ್ಧಾರ ಮಾಡುವ, ಅತಿಮಾನಸದ ಆಗಮನಕ್ಕಾಗಿ ತಯಾರು ಮಾಡುವ ಕಾರ್ಯವನ್ನು ಬದಿಗಿರಿಸಿ ಸಾಧಕರಿಂದ ಬರುತ್ತಿದ್ದ ಗುಡ್ಡೆಗಟ್ಟಲೆ ಪತ್ರಗಳಿಗೆ ಪ್ರತಿದಿನ ರಾತ್ರಿ ಬಹಳಷ್ಟು ಕಾಲ ಉತ್ತರ ಬರೆಯುತ್ತಿದ್ದರು. ಸಾಧಕರ ಪ್ರಗತಿಯತ್ತ ಲಕ್ಷ್ಯಕೊಡಲು ಅವರು ಕಷ್ಟಪಡುತ್ತಿದ್ದರು. ಮತ್ತು ಅವರ

ಬಗೆಗಿನ ವಿಷಯಗಳಲ್ಲಿ ಮಗ್ನರಾಗುತ್ತಿದ್ದರು. ಮತ್ತು ಹಾಗಿದ್ದಾಗ್ಯೂ ಅವರು ವಿಷಯಗಳನ್ನು ಹೇಗೆ ವ್ಯವಸ್ಥಿತಗೊಳಿಸಿದ್ದರು ಎಂದರೆ ಸಾಧಕರು ನೇರವಾಗಿ ನನ್ನ ಬಳಿ ನಿವೇದನೆ ಮಾಡಿಕೊಳ್ಳಬಹುದು, ವ್ಯಾವಹಾರಿಕ ರೀತಿಯಲ್ಲಿ ಭೌತಿಕ ಸ್ತರದ ಮೇಲೆ ಹಾಗೆಯೇ ಆಂತರಿಕವಾಗಿ ಸಾಧನೆಗೆ ನನ್ನ ಆಶೀರ್ವಾದಗಳನ್ನು ಹಾಗೂ ಸಹಾಯವನ್ನು ಪಡೆಯುವಂತಾಗಿತ್ತು. ಅವರು ಅತಿಮಾನಸದತ್ತ ಎತ್ತರಗಳ ಮೇಲಿರುವ ಸ್ತರಗಳನ್ನು ಮತ್ತು ತೊಂದರೆಗಳ ಮೇಲೆ ಜಯವನ್ನು ನನ್ನ ಮೂಲಕ ಸಿದ್ಧಿಸಿಗೊಳ್ಳಬಹುದಾಗಿತ್ತು. ಅತಿಮಾನಸವನ್ನು ಅರಸುತ್ತಿದ್ದ ನಮ್ಮ ಕಾರ್ಯಕ್ಕೆ ಅಡೆತಡೆಯಾಗಿದ್ದ ಭಿನ್ನ ಜಗತ್ತುಗಳು, ವಿಭಿನ್ನ ಸಾಮರ್ಥ್ಯಗಳು, ಪ್ರಜ್ಞೆಯ ಅಸಂಖ್ಯಾತ ಸ್ಥಿತಿಗಳು ಇವುಗಳ ಮೇಲೆ ಜಯ ಸಾಧಿಸುವುದಷ್ಟೇ ಅಲ್ಲ, ಆದರೆ ಅವುಗಳನ್ನು ವಶದಲ್ಲಿಟ್ಟುಕೊಂಡು ಅವುಗಳ ಮೇಲೆ ನಿಯಂತ್ರಣ ಹಾಗೂ ಪ್ರಭುತ್ವ ಪಡೆಯುವುದರಲ್ಲಿ ಶ್ರೀ ಅರವಿಂದರು ಮಗ್ನರಾಗಿದ್ದರು. ಪ್ರಾಪಂಚಿಕ ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯ, ಆಶ್ರಮವನ್ನು ಸಂಘಟಿಸುವುದು, ವ್ಯಕ್ತಿಗಳ ಪ್ರಗತಿಯತ್ತ ಲಕ್ಷ್ಯಕೊಡುವುದು, ಸಾಮೂಹಿಕ ಯೋಗದತ್ತ ಪ್ರಯತ್ನ ಕೈಕೊಳ್ಳುವುದು ಇಂತಹದನ್ನೆಲ್ಲ ನನಗೆ ವಹಿಸಿಕೊಡಲಾಗಿತ್ತು. ಆ ಸಮಯದಲ್ಲಿ ಜನರತ್ತ, ಅವರ ದೂರುಗಳನ್ನು ಕೇಳಿಸಿಕೊಳ್ಳುವತ್ತ ಮಗ್ನರಾಗಿರಲು ಅವರಿಗೆ ಸಮಯ ದೊರಕುತ್ತಿರಲಿಲ್ಲ. ಆದರೆ ಈಗ ಅವರು ತಮ್ಮನ್ನು ವಿಶ್ವಂಭರಗೊಳಿಸಿಕೊಂಡಿದ್ದಾರೆ, ವಿಸ್ತರಿಸಿಕೊಂಡಿದ್ದಾರೆ, ನಿಕಟರಾದವರೂ, ಹತ್ತಿರವಾದವರೂ ಆಗಿದ್ದಾರೆ. ಪ್ರತಿಯೊಬ್ಬನ ಜೊತೆಗೆ ಅವರ ಸಂಬಂಧವಿದೆ, ಹತ್ತಿರವಿರುವಿಕೆ ಮತ್ತು ನೇರ ಪ್ರಭಾವ ಇವುಗಳ ಮೂಲಕ ಪ್ರತಿಯೊಬ್ಬನೂ ಸುಲಭವಾಗಿ ಅವರ ಬಳಿ ಸಾಗಿ ಹೋಗಬಹುದು.

ಅವರ ಕಂಪಿಸುವ ದೈವೀ ಸಾನ್ನಿಧ್ಯ ಪ್ರಬಲವಾಗಿದೆ, ಮೂರ್ತರೂಪದ್ದಾಗಿದೆ, ಸಮಾಧಿಯ ಸುತ್ತಲೂ ಇದೆ. ಅವರ ಪ್ರಭಾವ ಕೇಂದ್ರ ಸತ್ತೆಯಲ್ಲಿ ಒಳನುಗ್ಗುತ್ತದೆ ಹಾಗೂ ಅದನ್ನು ಸ್ಪರ್ಶಿಸುತ್ತದೆ ಮತ್ತು ಆಧ್ಯಾತ್ಮಿಕ ಜೀವನಕ್ಕಾಗಿ ಪ್ರಜ್ಞೆಯನ್ನು ಜಾಗ್ರತಗೊಳಿಸುತ್ತದೆ. ಕುತೂಹಲದಿಂದ ಸಮಾಧಿಯನ್ನು ನೋಡಲು ಬರುವ ನಾಸ್ತಿಕರು, ನಂಬಿಕೆ ಇಲ್ಲದವರು, ದುಷ್ಟ ಸಂಕಲ್ಪವಿದ್ದವರು ಪವಾಡಸದೃಶ ರಸವಿದ್ಯೆಯಿಂದ ಆಂತರಿಕ ಶಾಂತಿ ಪಡೆದು ಚಕಿತರಾಗಿ ಮರಳಿ ಹೋಗುತ್ತಾರೆ, ಏಕೆಂದರೆ ಅವರು ತಮ್ಮ ಶಾಂತಿಯನ್ನು ಹಾಗೂ ಕರುಣೆಯನ್ನು ಸತತ



ಸುರಿಸುತ್ತಾರೆ. ಅವರ ಎದುರಿನಲ್ಲಿ ಹಾದು ಹೋದವರಿಗೆ ಇದು ಸ್ನಾನ ರೂಪದ್ದಾಗಿರುತ್ತದೆ. ಅದು ಅವರ ದೈವೀ ಸಾನ್ನಿಧ್ಯ ಹಾಗೂ ದೈವೀ ಶಕ್ತಿ ಇವುಗಳ ನಂಬಲಸಾಧ್ಯವಾದ ಚಟುವಟಿಕೆಯಿಂದ ವಿಪರೀತವಾಗಿ ತುಂಬಿಕೊಂಡಿರುತ್ತದೆ.

*

**ಸಮಾಧಿ: ಧ್ಯಾನಕ್ಕಾಗಿ ಪವಿತ್ರಗೊಳಿಸಿದ ಸ್ಥಾನ**

ನಾನು ಸಮಾಧಿಯತ್ತ ನೋಡಿ, ಅಲ್ಲಿ ಏನು ಸಂಭವಿಸುತ್ತಿದೆ ಎಂಬುದನ್ನು ಗಮನಿಸಿದಾಗ ಚೈತನ್ಯ ಹಾಗೂ ಪರಿವರ್ತನೆಗೆ ಒಳಪಡಿಸುವ ಶಕ್ತಿ ಇವುಗಳಿಂದ ಥಳಥಳಿಸುವ ಸ್ತಂಭವನ್ನು ಕಂಡುಕೊಂಡೆ. ಅದು ನನಗೆ ಆಶ್ಚರ್ಯವನ್ನುಂಟು ಮಾಡಿತು. ಅದು ಸಮಾಧಿಯ ಉದ್ದ ಹಾಗೂ ಅಗಲಗಳಿಂದ ಭವ್ಯತೆ, ಪ್ರಜ್ವಲತೆಗಳೊಂದಿಗೆ ಮೇಲಕ್ಕೇರುತ್ತ ಹೋಗುತ್ತದೆ (ಶ್ರೀಮಾತೆಯವರು ತಮ್ಮ ಕೈಗಳಿಂದ ಮೇಲಕ್ಕೇರುತ್ತಿರುವುದರ ಸಂಜ್ಞೆ ಮಾಡುತ್ತಾರೆ). ಅದು ಭೌತಿಕರೂಪ ಪಡೆಯುತ್ತಿರುವ ಹೊಸ ಪ್ರಕಾಶ. ...

ರಾತ್ರಿ ಕಾಲದಲ್ಲಿ, ಎಲ್ಲವೂ ಶಾಂತವಾಗಿದ್ದಾಗ ಕೆಲವು ಸತ್ತೆಗಳು ಈ ಸ್ಥಳದಲ್ಲಿ ಜನರು ತಮ್ಮ ಹಿಂದೆ ಬಿಟ್ಟುಕೊಟ್ಟು ಹೋದುದೆಲ್ಲವನ್ನು ಸ್ವಚ್ಛ ಮಾಡುತ್ತವೆ. ಅವರು ಬಿಟ್ಟುಕೊಟ್ಟದ್ದು ಮಿಥ್ಯೆಯ ರೂಪತಾಳುವಿಕೆಗಳು, ಆಸೆಗಳು, ಆತುರದಿಂದ ಮಾಡಿಕೊಂಡ ಕೋರಿಕೆಗಳು, ದುರದೃಷ್ಟಕರ ಸಂಕಲ್ಪ, ಕಾಯಿಲೆಗಳು, ವಿರೋಧೀ ಶಕ್ತಿಗಳು ಇತ್ಯಾದಿಯಾಗಿರುತ್ತವೆ, ಹೀಗೆ ಸ್ವಚ್ಛಗೊಳಿಸುವುದರ ಮೂಲಕ ಈ ಸ್ಥಳ ಶಾಂತಿಪೂರ್ಣವಾದದ್ದು, ಸಂತೋಷಕರವಾದದ್ದು ಆಗುವಂತೆ ಮಾಡುತ್ತವೆ. ಅವು ಸುತ್ತಲಿದ್ದದ್ದೆಲ್ಲವನ್ನು ಪರಿಶುದ್ಧಗೊಳಿಸುತ್ತವೆ, ಅದರಿಂದಾಗಿ ಶ್ರೀ ಅರವಿಂದರ ಸಾನ್ನಿಧ್ಯವಿರುವುದರ ಭಾವನೆ ಬರುವಂತಾಗುತ್ತದೆ. ಅದು ಧ್ಯಾನಕ್ಕಾಗಿ ಪವಿತ್ರಗೊಳಿಸಿದ ಸ್ಥಳ, ಹರಟೆ ಹೊಡೆಯುವುದಕ್ಕಲ್ಲ. ಅಲ್ಲಿ ಮಾತನಾಡಕೂಡದು – ಮಾತನಾಡುವುದರಿಂದ ಮನುಷ್ಯ ವಾತಾವರಣದಲ್ಲಿ ಕ್ಷೋಭೆಯನ್ನುಂಟು ಮಾಡುತ್ತಾನೆ. ಶ್ರೀ ಅರವಿಂದರು ಅಲ್ಲಿ ತಮ್ಮ ಮಹಿಮಾನ್ವಿತ ದೇಹದಿಂದ ಇಡೀ ಜಗತ್ತನ್ನು ಸೂಕ್ಷ್ಮ ಚಲನೆಯಲ್ಲಿ ಪೋಷಿಸುತ್ತ, ಕ್ರಮೇಣ ತಮ್ಮ ದೈವೀ ಪ್ರಜ್ಞೆಯನ್ನು, ದೈವೀ ಅವರೋಹಣಕ್ಕಾಗಿ ಪ್ರಕಟಿಸುತ್ತ ಭಾಗಶಃ ಪರದೆಯ ಹಿಂದೆ ಇದ್ದಾರೆ.

*

## ನಮ್ಮ ದೈವೀ ಸಾಧ್ಯತೆಯನ್ನು ಕುರಿತು ಜೀವಂತ ದೃಢೀಕರಣ

ನಮ್ಮ ದೈವೀ ಸಾಧ್ಯತೆಯನ್ನು ಕುರಿತು ಶ್ರೀ ಅರವಿಂದರು ಜೀವಂತ ದೃಢೀಕರಣವಾಗಿದ್ದಾರೆ, ದೈವೀ ಪ್ರಕಾಶ ಮತ್ತು ದೈವೀ ಸಾಮರ್ಥ್ಯಗಳೊಂದಿಗೆ ಹೊರಸೂಸುವ ದೈವಿಕತೆಯನ್ನು ಕುರಿತು ಇರುವ ವಚನ ನೀಡುವಿಕೆ – ಅದು ದೈವೀ ಪ್ರಕಟಣೆಯತ್ತ ಪ್ರಗತಿಪರವಾಗಿ ಹೆಜ್ಜೆ ಇರಿಸುವುದಾಗಿದೆ. ಆ ಕಾರಣದಿಂದಾಗಿಯೇ ಇಡೀ ವಾತಾವರಣ ದೈವಿಕವಾದ, ಘನತೆವೆತ್ತ ದೈವೀ ಶಾಂತಿಯೊಂದಿಗೆ ತುಂಬಿಕೊಂಡಿದೆ. ದೈವಿಕವಾದ ದೇಹದಿಂದ ಅಲ್ಲಿರುವವರು ಅವರೇ, ತಮ್ಮನ್ನು ದೈವಿಕವಾಗಿರಿಸಿಕೊಂಡ ಅವರು ಇಡೀ ಮನುಕುಲದ ಪ್ರತಿನಿಧಿಯಾಗಿದ್ದಾರೆ, ಅವರು ತಮ್ಮದೇ ಪ್ರಯತ್ನದಿಂದ, ತಪಸ್ಸು ಹಾಗೂ ತಮ್ಮ ದೇಹದ ಮೇಲೆ ಕೈಕೊಂಡ ಸಾಧನೆಗಳಿಂದ ತಮ್ಮ ದೇಹವನ್ನು ವೈಭವೋಪೇತ–ವಾದದ್ದನ್ನಾಗಿ ಮಾಡಿದ್ದಾರೆ. ಅವರು ದೊರಕಿಸಿದ ಸಿದ್ಧಿಗಳು ಹಾಗೂ ಅನುಭವಗಳು, ಯೌಗಿಕ ಪ್ರಯತ್ನದಿಂದ ಅವರು ತಮ್ಮ ದೇಹದಲ್ಲಿ ಸಂಗ್ರಹಿಸಿದ್ದುದು ಅವರ ದೇಹವನ್ನು ಪರಿವರ್ತಿಸುವ ಸಾಮರ್ಥ್ಯದಿಂದ ತುಂಬಿಬಿಟ್ಟಿವೆ. ಅದು ಹೊರಹರಿಯುತ್ತಿರುವ ಶಕ್ತಿ ಹಾಗೂ ಪ್ರಕಾಶಗಳಿಂದ ಕ್ರಿಯಾಶೀಲವಾಗಿ ತುಂಬಿಕೊಂಡಿದೆ, ಇದೇ ಇಡೀ ವಾತಾವರಣವನ್ನು ಆವರಿಸಿಕೊಂಡಿದೆ. ಸುತ್ತಲೆಲ್ಲೆಲ್ಲೂ ಅವರದೇ ಸಾನ್ನಿಧ್ಯವಿದೆ. ಅದು ಅತಿಮಾನಸ ಶಕ್ತಿಯಾಗಿರುವುದರಿಂದ ತಾಳಿಕೊಂಡು ಉಳಿಯುತ್ತದೆ, ಕುಗ್ಗಿಹೋಗುವ ಯಾವ ಕುರುಹನ್ನೂ ತೋರಿಸುವುದಿಲ್ಲ. ಅದು ಸಾಧ್ಯವಿಲ್ಲ.

ಸಮಾಧಿಯ ಸುತ್ತ ಪ್ರದಕ್ಷಿಣೆ ಹಾಕುವ ಜನರು ಇದನ್ನೇ ಹೀರಿಕೊಳ್ಳುತ್ತಾರೆ. ಅರಿವಿಗೆ ತಂದುಕೊಳ್ಳದೇ ಅವರು ಶ್ರೀ ಅರವಿಂದರ ದೈವೀ ಪ್ರೇಮದಲ್ಲಿ ಮುಳುಗು ಹಾಕುತ್ತಾರೆ. ಸಮಾಧಿಯ ಬಳಿ ಹೋದಾಗ ತಮ್ಮ ಮೇಲೆ ರಹಸ್ಯದ ಮುಸುಕು ಏಕೆ ಹಾಕಿಕೊಳ್ಳುತ್ತದೆ ಎಂಬುದನ್ನು ಅವರು ತಿಳಿದುಕೊಳ್ಳಲಾರರು. ಅದು ಅದ್ಭುತ–ವಾದದ್ದು! ಸಮಾಧಿಯನ್ನು ಸ್ಪರ್ಶಿಸಿದಾಗ ಅವರು ದಿಗ್ಭ್ರಮೆಗೊಳಗಾಗುತ್ತಾರೆ, ಏಕೆಂದರೆ ಅಲ್ಲಿ ಸುತ್ತಲೂ ಕಾರ್ಯ ಕೈಕೊಳ್ಳುತ್ತಿರುವ ಶಕ್ತಿ ಅವರ ಧಾರ್ಮಿಕ ಭಾವನೆಗಳನ್ನು ನಾಶ ಮಾಡುತ್ತದೆ. ಸ್ವರ್ಗಗಳತ್ತ ಹಾತೊರೆಯುತ್ತಿರುವ ಭಾವನೆಗಳನ್ನು ಚೂರು ಚೂರು ಮಾಡುತ್ತದೆ ಮತ್ತು ಅವರನ್ನು ಅವರಿಗೆ ಅರ್ಥವಾಗದ ದೈವೀ ನೈಜತೆಯ ಎದುರಿಗೆ ಇರಿಸುತ್ತದೆ. ಅಲ್ಲಿ ಪ್ರಕಟವಾಗುತ್ತಿರುವ ದೈವೀ ಸತ್ಯದ ಅಸಾಧಾರಣ ಗೋಚರ ಸಂಗತಿಯಿಂದ ಆಶ್ಚರ್ಯಚಕಿತರಾಗುತ್ತಾರೆ. ಆ ದೈವೀ ಪ್ರಭಾವಕ್ಕೆ ತಮ್ಮನ್ನು ತೆರೆದಿರಿಸಿಕೊಂಡವರು ಅದರ ಸ್ಪರ್ಶಕ್ಕೆ ಒಳಗಾಗುತ್ತಾರೆ, ಮತ್ತೊಮ್ಮೆ ಅದನ್ನು ತುಂಬಿಕೊಳ್ಳಲು, ಇಲ್ಲಿಯ ವಾತಾವರಣದಲ್ಲಿರುವ ದೈವೀ ಶಾಂತಿಯನ್ನು ತಮ್ಮ ಸತ್ತೆಯಲ್ಲಿ ಮೈಗೂಡಿಸಿಕೊಳ್ಳಲು ಮರಳಿ ಬರುತ್ತಾರೆ. ಈ ವಾತಾವರಣವನ್ನು ತುಂಬಿಬಿಡುವ ಹಾಗೂ ಅದರ ಮೇಲೆ ಪ್ರಾಬಲ್ಯ ಮೆರೆಸುವ ಪ್ರಜ್ಞಾಪೂರ್ಣ ಭವ್ಯತೆಯ ಹಾಗೆ ಅವರ ಸಾನ್ನಿಧ್ಯ ಎಷ್ಟೊಂದು ಮೂರ್ತಸ್ವರೂಪದ್ದಾಗಿದೆ ಹಾಗೂ ಎಷ್ಟೊಂದು ಜೀವಂತವಾಗಿದೆ. ಅದು ಮಾಯವಾಗುವ ಪ್ರಕಾಶದಲ್ಲಿ ಹಾಗೂ ಬಣ್ಣಗಳಲ್ಲಿ ಹಿಡಿದುಕೊಳ್ಳಲಾಗದ ದಿವ್ಯಾನಂದದ ಸೌಂದರ್ಯದಲ್ಲಿ, ಮತ್ತು ಪರಿಶುದ್ಧತೆಯ ಮನೋಭಾವದಲ್ಲಿ ಗ್ರಹಿಕೆಗೆ ನಿಲುಕಲಾರದ ಸಾನ್ನಿಧ್ಯದಲ್ಲಿ, ವಸ್ತುಭೂತವಾಗಿರದೇ ಇದ್ದರೂ ಭೌತಿಕವಾದದ್ದೆನಿಸುವದರಲ್ಲಿ, ಜಗತ್ತಿನ ಅರಿವಿಗೆ ಬಂದಿರದ ಮಾಧುರ್ಯವನ್ನು ಕೊಂಡೊಯ್ಯುತ್ತಿರುವುದರಲ್ಲಿ ಅದು ತೇಲಿಹೋಗುತ್ತಿರುವಂತೆ ಕಂಡುಬರುವುದನ್ನು ನೋಡಿದೆ. ಏಕಮುಖವಾಗಿರುವ, ಭಗವಂತನಿಗಾಗಿ ಉತ್ಸಾಹದಿಂದ ಅಭೀಪ್ಸೆ ಪಡುತ್ತಿರುವ ಹೃದಯವೊಂದು ಸಮಾಧಿಯ ಎದುರುನಿಂತಾಗ, ಶ್ರೀ ಅರವಿಂದರ ದಿವ್ಯಾನಂದದ ಹೊರತಾಗಿ ಬೇರೇನನ್ನೂ ಬಯಸದೆ ಇದ್ದಾಗ, ಅದನ್ನು ದಿವ್ಯಾನಂದದ ಪ್ರಾಂತದಲ್ಲಿ ಕಳಿಸಿಕೊಡಲಾಗುವುದು, ಆ ದಿವ್ಯಾನಂದ, ಸರ್ವಸಮರ್ಥವಾದ ಸ್ವರ್ಗಗಳು ಅನುಭವಕ್ಕೆ ತಂದುಕೊಂಡಿರಬಹುದಾದ ದಿವ್ಯಾನಂದಕ್ಕಿಂತ ಇಲ್ಲವೆ ಪೃಥ್ವಿ ಎಂದಾದರೂ ಕಂಡಿರಬಹುದಾದ ದಿವ್ಯಾನಂದಕ್ಕಿಂತ ಹೆಚ್ಚು ಒಳ್ಳೆಯದು ಮತ್ತು ಉನ್ನತವಾದದ್ದು ಆಗಿರುತ್ತದೆ.

*



## ಅವರು ತೊಂದರೆಗಳನ್ನು ಹಾಗೂ ಅಡೆತಡೆಗಳನ್ನು ನಿರಂತರ ಬೇರುಸಹಿತ ಕಿತ್ತುಹಾಕುತ್ತಾರೆ

ಅವರ ಭಕ್ತರು ಹಾಗೂ ಅಭೀಪ್ಸೆ ಪಡುವವರು – ತಮ್ಮ ಪ್ರಜ್ಞೆಯನ್ನು ಈ ಸ್ಥಳದ ಮೇಲೆ ತಮ್ಮ ಪ್ರಬಲ ಸಾನ್ನಿಧ್ಯದಿಂದ ಅಧಿಕಾರ ನಡೆಸುತ್ತಿರುವ ಶ್ರೀ ಅರವಿಂದರ ಪ್ರಜ್ಞೆಯೊಂದಿಗೆ ಏಕಗೊಳಿಸಲು ಅಭೀಪ್ಸೆ ಪಡುವವರು – ಅವರ ಘನಗಾಂಭೀರ್ಯವುಳ್ಳ ಸಾನ್ನಿಧ್ಯದ ಮಹಿಮೆಯನ್ನು, ನೀವು ನನ್ನನ್ನು ಈಗ ನೋಡುತ್ತಿರುವ ಮೂರ್ತರೂಪದಲ್ಲಿ, ನೋಡುತ್ತಾರೆ. ಅವರಲ್ಲಿ ನಿವೇದನೆ ಮಾಡಿಕೊಳ್ಳಲು ಬಯಸುವವರಿಗೆ ಅವರಿಂದ ಸ್ಥಿರಸ್ವರೂಪದ ಉತ್ತರ ಬಂದೇ ಬರುತ್ತದೆ. ಅವರು ತಮ್ಮ ಎಲ್ಲ ಬಲ ಹಾಗೂ ಸಾಮರ್ಥ್ಯಗಳೊಂದಿಗೆ ಅಲ್ಲಿದ್ದಾರೆ,

ಪರದೆಯ ಹಿಂದಿದ್ದು ಹೊಸ ಸೃಷ್ಟಿಯ ಮೇಲೆ ಅಧ್ಯಕ್ಷತೆ ವಹಿಸುತ್ತಾರೆ. ಪೋಷಣೆ ನೀಡುವ ಒತ್ತಾಯ ತರುತ್ತಾರೆ ಮತ್ತು ನಂಬಲಾಗದಷ್ಟು ತಾಳ್ಮೆಯಿಂದ, – ಅದು ಅವರು ಕಾರ್ಯಕೈಕೊಳ್ಳುವ ರೀತಿ, – ಒಂದರ ನಂತರ ಒಂದರಂತೆ ಜಯ ಗಳಿಸುತ್ತಾರೆ, ಮೊದಲು ಮನುಕುಲದ ಪ್ರಜ್ಞೆಯನ್ನು ಬದಲು ಮಾಡುವುದಾಗಿರುತ್ತದೆ, ನಂತರ ಅದರ ಎಲ್ಲ ಆಯಾಮಗಳಲ್ಲಿ ಅದನ್ನು ಪರಿವರ್ತಿಸುವುದಿರುತ್ತದೆ. ಇದನ್ನು ಕೈಕೊಳ್ಳುವಾಗ ಅವರಿಗೆ ಸರಿಯಾಗಿ ತಿಳಿದುದು ಏನೆಂದರೆ ಈ ಎಲ್ಲ ವಿರೋಧಗಳು, ಅಲ್ಪ ಕಾಲ ಉಳಿದುಕೊಳ್ಳುವ ಪತನಗಳು ಅಡೆತಡೆಗಳ ಮೇಲೆ ಜಯ ಸಾಧಿಸಲು ಮನುಕುಲಕ್ಕೆ ಸಹಾಯ ಮಾಡುತ್ತವೆ ಎಂಬುದಾಗಿರುತ್ತದೆ, ತಮ್ಮ ಪ್ರಕಾಶದ ಶಾಂತಿಯಲ್ಲಿ, ಜಾಗತಿಕ ಚಲನೆಯ ಮೂಲಕ, ಮನುಕುಲದ ಕ್ರಿಯೆ ಹಾಗೂ ಮನೋಭಾವಗಳಿಗೆ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಎಲ್ಲದಕ್ಕಿಂತಲೂ ಮಿಗಿಲಾಗಿ ಇದಕ್ಕೆ ಆಧಾರ ಆಧ್ಯಾತ್ಮಿಕತೆಯಾಗಿರುತ್ತದೆ, ಮತಾಂಧತೆಯೇ ಸಾರವಾಗಿರುವ ವಂಚನೆಯ ಧಾರ್ಮಿಕ ಚಲನೆಗಳು, ಯುದ್ಧ, ಮತ್ತು ಅನಾವಶ್ಯಕ ಜಗಳಗಳು ಇಂತಹವುಗಳ ಆಧಾರ ಪಡೆದಿರುವುದಿಲ್ಲ, ಇವುಗಳ ಪರಿಣಾಮ ಎಲ್ಲರಿಗೂ ತಿಳಿದಿದೆ. ಜಗತ್ತು ಜನರ ಕ್ರೌರ್ಯಗಳಿಂದ ದಣಿದುಕೊಂಡಿದೆ – ರಕ್ತ ಹರಿಯುತ್ತದೆ, ಹಿಂಸೆ ಪ್ರಾಬಲ್ಯ ಪಡೆಯುತ್ತದೆ. ಈಗಿರುವಂತಹ ಹಾಳುಗೆಡುವಿಕೆಯನ್ನು ನಾವು ಹಿಂದೆಂದೂ ನೋಡಿರಲಿಲ್ಲ. ಜನರು ಪಶುಗಳಿಗಿಂತಲೂ ಕೀಳಾದವರಾಗಿದ್ದಾರೆ.

ಮನುಷ್ಯ ತನ್ನ ಪ್ರಜ್ಞೆಯನ್ನು ಬದಲು ಮಾಡದೆ ಇರುವವರೆಗೆ .. ಅದು ಜಯ ಸಾಧಿಸಲಾಗದ, ಪಾರಾಗಲು ಸಾಧ್ಯವಿಲ್ಲದ ಸ್ಥಿತಿ. ಮನುಷ್ಯರು, ಅಸಾಧಾರಣ ಕಾರ್ಯನಿರ್ವಾಹಕ ಶಕ್ತಿಯನ್ನು ಹೊಂದಿದ ವ್ಯಕ್ತಿಗಳು ಭಗವಂತ ಹಾಗೂ ವಿರೋಧೀ ಶಕ್ತಿಗಳು ಇವುಗಳ ನಡುವೆ ಸೇತುವೆ ನಿರ್ಮಿಸಲಾರರು. ಅಜ್ಞಾನ ಮನುಷ್ಯನನ್ನು ಈ ಸ್ಥಿತಿಯತ್ತ ನೂಕಿದೆ. ಆದರೆ ಚಿಂತೆ ಮಾಡುವುದು ಬೇಡ. ಅಧಿಕಾರವನ್ನು ವಹಿಸಿಕೊಂಡ, ಹೊಣೆಗಾರಿಕೆಯನ್ನು ಹೊತ್ತ ಒಬ್ಬರು ಮನುಷ್ಯನನ್ನು ಹೊಸ ಜಗತ್ತಿನ ಮುಂಭಾಗಗಳಿಗೆ ತರಲು ಕಾರ್ಯ ಕೈಕೊಳ್ಳುತ್ತಿದ್ದಾರೆ. ಅವರು ನಿರಂತರ ತೊಂದರೆಗಳನ್ನು ಹಾಗೂ ಅಡೆತಡೆಗಳನ್ನು ಬೇರುಸಹಿತ ಕಿತ್ತುಹಾಕುತ್ತಿದ್ದಾರೆ, ಮನುಷ್ಯ ಪ್ರಕಾಶಮಯ ಭವಿಷ್ಯತ್ತಿನೆಡೆಗೆ ಸಾಗುವಂತೆ ಅವನಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ರೋಗವನ್ನು ಅವರು ಮಾತ್ರ ನಿವಾರಿಸಬಲ್ಲರು, ಏಕೆಂದರೆ ಅವರು ನಮ್ಮ ಅಸ್ತಿತ್ವದ ಪ್ರಭುವಾಗಿದ್ದಾರೆ.



ಆತ್ಮವಿಶ್ವಾಸದಿಂದಿರಿ, ಎಲ್ಲವೂ ಒಳ್ಳೆಯದಾಗುವುದು. ಉತ್ಕ್ರಾಂತಿಯ ವಕ್ರಗತಿಯಲ್ಲಿ ಬಹುಶಃ ಮನುಷ್ಯ ತಲುಪಿರಬಹುದಾದ ಅತ್ಯಂತ ಕೆಳಗಿನ ಸ್ಥಿತಿ, ಅವನ ಪಾರ್ಥಿವ ಅಸ್ತಿತ್ವದಲ್ಲಿಯ ವಿಪರ್ಯಯ. ಆದರೆ ಬೇಗನೇ ನಾವು ಪ್ರಕಾಶವನ್ನು ಕಂಡುಕೊಳ್ಳುವವರಿದ್ದೇವೆ – ಮಹತ್ತರ ಬದಲಾವಣೆಯ ಭರವಸೆ ಇದೆ – ಪೃಥ್ವಿಯ ಮೇಲೆ ಭಗವಂತನ ರಾಜ್ಯವನ್ನು ಕೆಳಗಿಳಿಸಿ ತಂದು ಅದನ್ನು ಸ್ಥಾಪಿಸಲು ಅವರ ಸಾನ್ನಿಧ್ಯಕ್ಕೆ ಮಾತ್ರ ಸಾಧ್ಯವೆಂಬುದರ ನಿಶ್ಚಿತತೆ ಇದೆ.

**(Blessings of the Grace: pp. 119-125 28/76) – ಶ್ರೀಮಾತೆ**

*

## ಅಮರತ್ವ ಮತ್ತು ಮರಣರಹಿತ ಸ್ಥಿತಿ

ಅಮರತ್ವ ಮತ್ತು ಮರಣರಹಿತ ಸ್ಥಿತಿ ಇವುಗಳ ನಡುವೆ ವ್ಯತ್ಯಾಸವಿದೆ. ಅದನ್ನು ಶ್ರೀ ಅರವಿಂದರು 'ಸಾವಿತ್ರಿ' ಮಹಾಕಾವ್ಯದಲ್ಲಿ ಚೆನ್ನಾಗಿ ವರ್ಣಿಸಿದ್ದಾರೆ –

ಭವಿಷ್ಯತ್ತಿನಲ್ಲಿ ಮಾನವನ ಭೌತಿಕ ದೇಹ ಎದುರು ನೋಡಬಹುದಾದದ್ದು ಮರಣರಹಿತ ಸ್ಥಿತಿಯಾಗಿರುತ್ತದೆ. ಅದು ಸತತ ಸಂಭವಿಸುವ ಜನ್ಮ ತಾಳುವಿಕೆ–ಯಾಗಿರುತ್ತದೆ. ಹಿಂದೆ ಮತ್ತೆ ಉರುಳಿ ಬಿದ್ದು, ನಮ್ಯತೆ ಇಲ್ಲದೆ ಇರುವುದರ ಕಾರಣದಿಂದಾಗಿ ವಿಭಜನೆಗೊಳ್ಳುವುದು, ವಿಶ್ವಂಭರ ಚಲನೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅಸಮರ್ಥವಾಗಿರುವುದು ಇವೆಲ್ಲ ಕಾರಣಗಳಿಂದಾಗಿ ಭವಿಷ್ಯದತ್ತ ಸಾಗಲು ದೇಹವನ್ನು ಬಿಟ್ಟುಕೊಡಲಾಗಿರುತ್ತದೆ.

ಅಲ್ಲಿ ಸ್ಥಿರವಾಗಿ ಉಳಿದುಕೊಳ್ಳುವ ಒಂದು ಅಂಶವಿರುತ್ತದೆ: ಪ್ರತಿಯೊಂದು ಮಾದರಿಯ ಅಣುವಿಗೆ ಆಂತರಿಕ ಅಂಶಗಳ ಸಂಘಟನೆ ಭಿನ್ನವಾಗಿರುತ್ತದೆ, ಅದೇ ದ್ರವ್ಯದಲ್ಲಿ ಭಿನ್ನತೆಯನ್ನು ಉಂಟುಮಾಡುತ್ತದೆ. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಬಹುಶಃ ಅವನ ದೇಹದ ಜೀವಕೋಶಗಳು ಸಂಘಟಿಸುವ ಭಿನ್ನ, ವಿಶಿಷ್ಟ ರೀತಿಯಿರುತ್ತದೆ. ಈ ವಿಶಿಷ್ಟ ರೀತಿಯೇ ಎಲ್ಲ ಬಾಹ್ಯ ಬದಲಾವಣೆಗಳಲ್ಲಿ ಪಟ್ಟುಹಿಡಿದು ಉಳಿದುಕೊಳ್ಳುತ್ತದೆ. ಉಳಿದದ್ದೆಲ್ಲವನ್ನು ಬಿಟ್ಟುಕೊಡಲಾಗಿರುತ್ತದೆ ಮತ್ತು ಬೇರೆ ರೀತಿಯಲ್ಲಿ ಕೈಕೊಳ್ಳಲಾಗುತ್ತದೆ. ಆದರೆ ಬಿಟ್ಟುಕೊಡುವುದನ್ನು ಹೊಸದರತ್ತ ಮುಂದೆ ಸಾಗುವಂತೆ ಒತ್ತು ನೀಡಿ ಕೈಕೊಳ್ಳಲಾಗಿರುತ್ತದೆ, ಅದು ಹಿಂದೆ ಕುಸಿದು ಮರಣಹೊಂದಲಿ ಎಂದಲ್ಲ, ಮತ್ತು ದೈವೀ ಸತ್ಯದ ಪ್ರಗತಿಪರ ಚಲನೆಯನ್ನು ಅನುಸರಿಸಲು ಸತತ ಅಭೀಪ್ಸೆಪಡುತ್ತ ಬೇರೆ ರೀತಿಯಲ್ಲಿ ಕೈಕೊಳ್ಳಲಾಗುತ್ತದೆ.

ಆದರೆ ಅದಕ್ಕಾಗಿ ದೇಹ – ದೇಹದ ಪ್ರಜ್ಞೆ – ಮೊದಲು ತನ್ನನ್ನು ವಿಸ್ತರಿಸಿಕೊಳ್ಳುವುದನ್ನು ಕಲಿತುಕೊಳ್ಳಬೇಕು. ಅದು ಅತ್ಯಗತ್ಯ, ಏಕೆಂದರೆ, ಹಾಗಿಲ್ಲದೆ ಹೋದರೆ, ಜೀವಕೋಶಗಳು ಅತಿಮಾನಸ ಪ್ರಕಾಶದ ಒತ್ತಡದಡಿಯಲ್ಲಿ ಒಂದು ಬಗೆಯ ಕುದಿಯುತ್ತಿರುವ ಅಂಬಲಿಯಲ್ಲಿದ್ದ ಹಾಗಾಗುತ್ತವೆ.

ಸಾಮಾನ್ಯವಾಗಿ ಸಂಭವಿಸುವುದೇನೆಂದರೆ, ದೇಹ ಗರಿಷ್ಠಮಟ್ಟದ ಗಾಢತೆ ಇರುವ ಅಭೀಪ್ಸೆಯನ್ನು ಇಲ್ಲವೆ ದಿವ್ಯಾನಂದವನ್ನು ತಲುಪಿದಾಗ, ಅದನ್ನು ಹಿಡಿದಿಟ್ಟುಕೊಳ್ಳಲು ಶಕ್ತವಾಗುವುದಿಲ್ಲ. ಅದು ಚಪ್ಪಟೆ(flat)ಯಾಗುತ್ತದೆ, ನಿಶ್ಚಲವಾಗುತ್ತದೆ, ಹಿಂದೆ ಬೀಳುತ್ತದೆ. ವಿಷಯಗಳು ನೆಲೆಗೊಳ್ಳುತ್ತವೆ, – ಹೊಸ ಕಂಪನದೊಂದಿಗೆ ನೀವು ಶ್ರೀಮಂತರಾಗುತ್ತೀರಿ, ಆದರೆ ಆಗ ಪ್ರತಿಯೊಂದು ತನ್ನ ಮುನ್ನಡೆಯನ್ನು ಪುನರ್ವಶಪಡಿಸಿಕೊಳ್ಳುತ್ತದೆ ಹಾಗಾಗಿ ನೀವು ನಿಮ್ಮನ್ನು ವಿಸ್ತರಿಸಿಕೊಳ್ಳಬೇಕು, ಅದರಿಂದಾಗಿ ಅತಿಮಾನಸ ಶಕ್ತಿಯ ಗಾಢತೆಗಳನ್ನು ಅಳುಕದೆ ಸಹಿಸಿಕೊಳ್ಳಲು ಕಲಿತುಕೊಳ್ಳುವಂತಾಗುವುದು, ದೈವೀ ಸತ್ಯದ ಆರೋಹಣದೊಂದಿಗೆ, ಯಾವಾಗಲೂ, ಮುಂದೆ ಸಾಗಿ ಹೋಗುವಂತಾಗುವುದು, ದೇಹದ ಬೂದಿಯಲ್ಲಿ ಹಿಂದೆ ಬಿದ್ದು ಹೋಗದಂತಾಗುವುದು.

**(ಅನುಯಾಯಿಯೊಂದಿಗೆ ಮಾತುಕತೆ: 25–11–1959) – ಶ್ರೀಮಾತೆ**

*

## ನಾನಿಲ್ಲಿದ್ದೇನೆ, ನಾನಿಲ್ಲಿದ್ದೇನೆ

(ಶ್ರೀ ಅರವಿಂದರಿಗೆ ಹತ್ತಿರದ ಸಹಾಯಕನಾಗಿದ್ದ, ದೀರ್ಘಕಾಲ ಅವರ ಅನುಯಾಯಿಯಾಗಿದ್ದ ನಿರೋದಬರಣ ಶ್ರೀ ಅರವಿಂದರು ದೇಹ ತ್ಯಜಿಸಿದ ನಂತರ ಬರೆದ ಟಿಪ್ಪಣಿಯಿಂದ ಆಯ್ದುಕೊಂಡದ್ದು.)

### ಭವ್ಯ ಯಜ್ಞಾಹುತಿಯ ಕೊನೆಯ ಕ್ಷಣಗಳು

ಶ್ರೀ ಅರವಿಂದರು ತಮ್ಮ ಸುತ್ತಲಿರುವ ವಾತಾವರಣದಿಂದ ಹಿಂದೆ ಸರಿದುಕೊಂಡಂತೆ ತೋರಿಬಂದರು. ಸ್ಪಷ್ಟವಾಗಿ, ದೇಹದ ಕಷ್ಟಗಳನ್ನು ಕುರಿತು ಚಿಂತಿಸುವುದರ ಬದಲಾಗಿ, ಅವರ ದೃಷ್ಟಿಕೋನದಲ್ಲಿದ್ದ ಅದಾವುದೋ ಒಂದು ಉದ್ದೇಶಕ್ಕಾಗಿ ಆಳವಾಗಿ ಮುಳುಗಿಹೋಗುವುದು ಹೆಚ್ಚು ಉಪಯುಕ್ತವಾದದ್ದೆಂದು ಅವರು ಕಂಡುಕೊಂಡರು. ಜಗತ್ತಿಗೆ ಪ್ರಾಮುಖ್ಯತೆಯುಳ್ಳದ್ದೆನಿಸುವ ಹೆಚ್ಚು



ದುರ್ಭೇಧ್ಯವಾದ ಕಾರ್ಯದಲ್ಲಿ ತೊಡಗಿಕೊಂಡಾಗ ಅವರು ದೇಹ ಅದರದೇ ಕ್ರಿಯೆ ಹಾಗೂ ಪ್ರತಿಕ್ರಿಯೆಗಳಲ್ಲಿ ತೊಡಗಿಕೊಂಡಿರಲಿ ಎಂದು ಅದಕ್ಕೆ ಅನುವು ಮಾಡಿಕೊಟ್ಟ ಹಾಗೆ ತೋರಿಬಂದಿತು. ಅವರು ಧಾರಣ ಮಾಡಿದ ದೇಹ ಅವರಿಗೆ ಒಳ್ಳೆಯ ಸೇವೆ ಸಲ್ಲಿಸಿತ್ತು. ಶ್ರೀಮಾತೆಯವರು ಹೇಳುವ ಹಾಗೆ ಅದು ವೇದನೆಗೊಳಗಾಗಿತ್ತು, ತಾಳಿಕೊಂಡಿತ್ತು, ನಮ್ಮೆಲ್ಲರಿಗಾಗಿ ಕಾರ್ಯ ಕೈಕೊಂಡಿತ್ತು, ಎಲ್ಲವನ್ನೂ ಸಿದ್ಧಿಸಿಕೊಂಡಿತ್ತು. ಈಗ ಅದು ಅವರ ಚಲನೆಗಳ ದೇವ–ಸದೃಶ ಹರಡಿಕೆಗೆ ಅಡೆತಡೆಯನ್ನುಂಟು ಮಾಡುತ್ತಿದ್ದರೆ, ಅವರು ಅದನ್ನು ಏಕೆ ಬದಲಿಸಬಾರದು? ಭೌತಿಕ ಅಡಚಣೆ ತಮ್ಮ ಕಾರ್ಯದಲ್ಲಿ ತಮಗೆ ತೊಂದರೆ ಕೊಡಲು ಅನುವು ಮಾಡಿಕೊಡದೇ ಇದ್ದುದರಿಂದಾಗಿ ಮತ್ತು ಆದ್ಯಂತ ಅದೇ ಬಗೆಯ – ಪ್ರಜ್ವಲತೆಯನ್ನು, ಭಾವೋನ್ಮತ್ತತೆಯನ್ನು ತಮ್ಮ ಕಾರ್ಯದಲ್ಲಿ ಕಾಪಾಡಿಕೊಂಡು ಬಂದಿದ್ದರಿಂದಾಗಿ, ಕಾರ್ಯವನ್ನು ಸಿದ್ಧಿಸಿಕೊಂಡ ನಂತರ ತಮ್ಮ ದೇಹದ ವೇದನೆ ತಮ್ಮ ರಹಸ್ಯ, ಘನತೆವೆತ್ತ ಉದ್ದೇಶದಿಂದ ಮಾರ್ಗಚ್ಯುತಿ–ಗೊಳ್ಳುವಂತೆ ಮಾಡುವುದಕ್ಕೆ ಅನುವು ಮಾಡಿಕೊಡಲಿಲ್ಲ. ಈ ಘೋರ ಅಸಮರ್ಥತೆಯಿಂದಲೂ ಕೂಡ ಅವರು ಸಾಕಷ್ಟು ಅನುಕೂಲತೆಯನ್ನು ಒದಗಿಸಿಕೊಂಡರು. ಅವರದು ಪರಿಸ್ಥಿತಿಗಳಿಗೆ, ಅವು ಎಷ್ಟೇ ವಿರೋಧ ಒಡ್ಡುತ್ತಿದ್ದರೂ ಹೆದರಿಕೊಳ್ಳುವ ಸ್ವಭಾವವಾಗಿರಲಿಲ್ಲ. ಒಂದು ಮುಂಚೂಣಿಯಲ್ಲಿ ಅವರು ಸೋಲನ್ನು ಎದುರಿಸಬೇಕಾದಾಗ, ಇನ್ನೊಂದೆಡೆಗೆ ಅದನ್ನು ಸರಿದೂಗಿಸಿಕೊಳ್ಳುವ ಲಾಭ ಪಡೆಯಬೇಕಾಗಿತ್ತು. ಸೋಲು, ವಿಫಲತೆಗಳು ಒಂದು ಕಾರ್ಯದಲ್ಲಿ ಇವೆ ಎಂದು ಅವರು ಮೊದಲೇ ಕಂಡುಕೊಂಡಿದ್ದಾಗಲೂ ಕೂಡ ಅವರನ್ನು ಅದು ಕಾರ್ಯ ಕೈಕೊಳ್ಳದಂತೆ, ಕೊನೆಯವರೆಗೆ ಹೋರಾಟ ನಡೆಸದಂತೆ ಮಾಡುತ್ತಿರಲಿಲ್ಲ. "ನನ್ನ ಮಣಿಹ ವಿಫಲವಾಗುವುದೆಂದು ನಾನು ತಿಳಿದುಕೊಂಡಿದ್ದಾಗಲೂ ಕೂಡ ಕೊನೆಯ ಕ್ಷಣದವರೆಗೆ ಕಾರ್ಯ ಕೈಕೊಳ್ಳುತ್ತ ಹೋಗುವೆ" ಎಂದು ಅವರು ಒಂದು ಪತ್ರದಲ್ಲಿ ಬರೆದಿದ್ದರು. ಭಗವದ್ಗೀತೆಯಲ್ಲಿ ಹೇಳಿದ ನಿಷ್ಕಾಮ ಕರ್ಮ ಅವರ ಧ್ಯೇಯ ಸೂತ್ರ(motto)ವಾಗಿತ್ತು.

ಆ ಡಿಸೆಂಬರ ನಾಲ್ಕನೆಯ ದಿನಾಂಕ ಸ್ಮರಣಾರ್ಹವಾಗಿತ್ತು, ಆ ದಿನಾಂಕವನ್ನು ಎಂದೆಂದಿಗೂ ನೆನಪಿಸಿಕೊಳ್ಳಲು ಸ್ವರ್ಣಾಕ್ಷರಗಳಲ್ಲಿ ಬರೆದಿಡುವಂತಹದಾಗಿತ್ತು. ಶ್ರೀ ಅರವಿಂದರು ತಾವಿಳಿದು ಹೋಗಿದ್ದ ಆಳದಿಂದ ಹೊರಗೆ ಬಂದಿದ್ದರು ಮತ್ತು ಎದ್ದು ಕುಳಿತುಕೊಳ್ಳಬೇಕೆಂಬ ಆಶಯವನ್ನು ಅಭಿವ್ಯಕ್ತಪಡಿಸಿದರು. ನಾವು ವಿರೋಧ

ವ್ಯಕ್ತಪಡಿಸಿದಾಗಲೂ ಕೂಡ ಅವರು ಒತ್ತಾಯ ಮಾಡಿದರು. ಸ್ವಲ್ಪ ಸಮಯದ ನಂತರ ಅವರಲ್ಲಿದ್ದ ಎಲ್ಲ ವೇದನಾಪೂರ್ಣ ರೋಗ ಲಕ್ಷಣಗಳು ಪವಾಡಸದೃಶ ರೀತಿಯಲ್ಲಿ ಮಾಯವಾಗಿದ್ದನ್ನು ನಾವು ನೋಡಿದೆವು ಮತ್ತು ಅವರು ಹೆಚ್ಚಾಗಿ ಸಾಮಾನ್ಯ ಆರೋಗ್ಯವಂತ ವ್ಯಕ್ತಿಯ ಹಾಗೆ ಇರುವಂತೆ ಕಂಡುಬಂದರು. ನಂತರ ಅವರು ಕುರ್ಚಿಯಲ್ಲಿ ಕುಳಿತುಕೊಂಡರು. ಆ ಬದಲಾವಣೆ ಎಷ್ಟೊಂದು ಒಮ್ಮೆಗೆ ಹಾಗೂ ಅನಿರೀಕ್ಷಿತವಾಗಿ ಆಗಿತ್ತೆಂದರೆ, ನಾವು ಅತ್ಯಂತ ಸಂತೋಷದಿಂದ, ಆಶ್ಚರ್ಯದಿಂದ ಒಬ್ಬರ ಮುಖವನ್ನು ಇನ್ನೊಬ್ಬರು ನೋಡುವ ಹಾಗೆ ನೋಡಿದೆವು. "ಕೊನೆಗೆ ನಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಳ್ಳಲಾಯಿತು!" ಎಂದುಕೊಂಡೆವು. ನಮ್ಮ ಭಕ್ತಿ ಇರುವ ಹೃದಯದಿಂದ ಮೌನದಲ್ಲಿ ಇದೇ ಭಾವನೆ ಪುಟಿದೆದ್ದು ಬರುತ್ತಿತ್ತು. ಈಗ ನಮ್ಮ ಪ್ರಶ್ನೆಯನ್ನು ಮತ್ತೆ ಕೇಳುವ ಸಾಹಸ ಮಾಡಿದೆವು: "ಈ ರೋಗ ನಿವಾರಣೆಗಾಗಿ ನೀವು ನಿಮ್ಮ ಶಕ್ತಿಯನ್ನು ಉಪಯೋಗಿಸುವುದಿಲ್ಲವೆ?" "ಇಲ್ಲ" ಎಂಬ ಆಘಾತಕಾರಕ ಉತ್ತರ ಬಂದಿತು. ನಮ್ಮ ಕಿವಿಗಳು ಕೇಳಿಸಿಕೊಂಡದ್ದನ್ನು ನಾವು ನಂಬಲಿಕ್ಕಾಗಲಿಲ್ಲ, ಮತ್ತು ನಾವು ನಂಬಲಾರದ್ದನ್ನು ದೃಢೀಕರಿಸಿಕೊಳ್ಳುವುದಕ್ಕೆ ಮತ್ತೆ ಅದೇ ಪ್ರಶ್ನೆಯನ್ನು ಕೇಳಿದೆವು. ಈಗ ಭ್ರಮೆಗೆ ಎಡೆಗೊಡುವುದಕ್ಕೆ ಸ್ಥಳ ಉಳಿದಿರಲಿಲ್ಲ. ನಾವು ಕೇಳಿದ್ದು ಖಡ್ಗದ ತುದಿಯ ಹಾಗೆ ಸ್ಪಷ್ಟವಾಗಿತ್ತು ಹಾಗೂ ಹರಿತವಾಗಿತ್ತು. ನಂತರ ನಾವು ದಿಟ್ಟತನದ ಪ್ರಶ್ನೆಯನ್ನು ಕೇಳಿದೆವು: "ಏಕೆ ಉಪಯೋಗಿಸುವುದಿಲ್ಲ? ನೀವು ಶಕ್ತಿಯನ್ನು ಉಪಯೋಗಿಸದಿದ್ದರೆ ರೋಗ ನಿವಾರಣೆ ಆಗುವುದು ಹೇಗೆ?" ಇದಕ್ಕೆ ಅವರು: "ಅದನ್ನು ವಿವರಿಸಲಾಗದು, ನೀವು ಅದನ್ನು ತಿಳಿದುಕೊಳ್ಳಲಾರಿರಿ" ಎಂದು ಸರಳ ರೀತಿಯಲ್ಲಿ ಗೂಢ ಉತ್ತರವನ್ನು ನೀಡಿದರು.

ಇಲ್ಲಿ ಕೊನೆಗೆ ಆ ರಹಸ್ಯದ ಬೀಗದ ಕೈ ಇದ್ದಿತು! ಆ ಕಾರಣದಿಂದಾಗಿಯೆ ರೋಗ ಹೆಜ್ಜೆ ಹೆಜ್ಜೆಗೆ ಉಲ್ಬಣಿಸುತ್ತ ಹೋಗಿತ್ತು. ಅದರ ಇಳಿಮುಖದ ಮಾರ್ಗದಲ್ಲಿ ಮೂರು ಸ್ಪಷ್ಟ ಹಂತಗಳನ್ನು ಗುರುತಿಸಲಾಗಿತ್ತು: 'ಸಾವಿತ್ರಿ' ಮಹಾಕಾವ್ಯವನ್ನು ಪೂರ್ತಿಗೊಳಿಸಿದ್ದು, ದರ್ಶನ ನೀಡಿದ್ದು, ಮತ್ತು ಶಾಲೆಯ ವಾರ್ಷಿಕ ದಿನಾಚರಣೆ, ಪ್ರತಿಯೊಂದು ಹಂತ ಆಳಾತಿ ಆಳದಲ್ಲಿ ಆಂತರಿಕವಾಗಿ ಒಳಗೆಳೆದುಕೊಂಡ ಸ್ಥಿತಿಯನ್ನು ಅನುಸರಿಸಿತ್ತು. ಅವರ ಕೊನೆಯ ಹಂತಗಳೊಂದರಲ್ಲಿ ಶ್ರೀಮಾತೆಯವರು: "ನಾನು ಅವರ ಬಳಿ ಇದ್ದಾಗೆಲ್ಲ ಅವರು ಅತಿಮಾನಸ ಪ್ರಕಾಶವನ್ನು ಕೆಳಗೆಳೆದು ತರುತ್ತಿದ್ದುದನ್ನು ನಾನು ನೋಡುತ್ತಿದ್ದೆ" ಎಂದು



ಹೇಳಿದ್ದರು. ಈ ಹೇಳಿಕೆಯಿಂದ ಶ್ರೀ ಅರವಿಂದರು ಯಾವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂಬುದು ಸ್ಪಷ್ಟವಾಗುತ್ತದೆ. ಅವರು ತಮ್ಮ ನೆಟ್ಟನೋಟವನ್ನು ಮತ್ತು ಏಕಾಗ್ರತೆಯನ್ನು ಬೇರೆ ಯಾವುದೋ ವಿಷಯದತ್ತ ಹೊರಳಿಸಿದ್ದರು, ಅದು ಅವರ ದೃಷ್ಟಿಯಲ್ಲಿ ದೇಹದ ವೇದನೆಗಳಿಗೆ ಲಕ್ಷ್ಯಕೊಡುವುದಕ್ಕಿಂತ ಹೆಚ್ಚು ಮಹತ್ವದ್ದಾಗಿರಬಹುದು. ಆದರೆ ನಮಗೆ ಆ ದರ್ಶನವಿರಲಿಲ್ಲ, ತಿಳಿವಳಿಕೆ ಇದ್ದಿರಲಿಲ್ಲ, ಹಾಗಾಗಿ ನಾವು ದೈವೀ ಪ್ರಕಾಶದ ಅವರೋಹಣ ನಮ್ಮ ಹೃದಯದ ಬಯಕೆಯನ್ನು ನೆರವೇರಿಸುವುದೆಂದು ನಾವು ಯೋಚಿಸಿದ್ದೆವು.

ಒಂದು ಗಂಟೆಯ ನಂತರ ಅವರು ಮರಳಿ ತಮ್ಮ ಹಾಸಿಗೆಯತ್ತ ತೆರಳಿದರು, ಅವರು ಅಲ್ಲಿಗೆ ತೆರಳುತ್ತಿದ್ದಂತೆ ರೋಗದ ಎಲ್ಲ ಕುರುಹು ಹಾಗೂ ಲಕ್ಷಣಗಳು ಸೇಡುತೀರಿಸಿಕೊಳ್ಳುವ ರೀತಿಯಲ್ಲಿ ಮರಳಿ ಬಂದವು. ಅವರಿಗೆ ದೊರೆತಿದ್ದ ಅಲ್ಪಕಾಲದ ವಿಶ್ರಾಂತಿ, ಮುಂದೂಡಿಕೊಂಡು ಬರುತ್ತಿದ್ದ ಕರಾಳ ಛಾಯೆಯೊಡನೆ ಜಯಿಸುವುದಕ್ಕೆ ಹೋರಾಡಲು ಕಾಲಾವಧಿಯನ್ನು ಒದಗಿಸಿದಂತೆ ತೋರಿಬಂದಿತು, ಆ ಛಾಯೆ ಅವರ ಕಾರ್ಯದ ಮೇಲೆ ಅಕಾಲಿಕ ಪರದೆಯನ್ನು ಎಳೆಯಲು ಪ್ರಯತ್ನಿಸುತ್ತಿತ್ತು. ಮೃತ್ಯುವಿನ ಕ್ಷಣಕ್ಕಿಂತ ಅರ್ಧ ಗಂಟೆಕಾಲ ಮೊದಲು ಅವರು ಸ್ವಲ್ಪ ನೀರನ್ನು ಕುಡಿದರು, ಎಲ್ಲರ ಮೇಲೆ ಕೊನೆಯ ದಯಾರ್ದ್ರ ಕೃಪಾಕಟಾಕ್ಷವನ್ನು ಬೀರಿದರು, ಅದು ಅವರಿಗೆ ಸಲ್ಲಿಸಿದ ಸೇವೆಯನ್ನು ಕುರಿತಾಗಿತ್ತು, ಮತ್ತು ಕೊನೆಯದರಲ್ಲಿ ಮುಳುಗು ಹಾಕಿದರು.

ಬೆಳಗಿನ ಮುಂಚಿನ ಗಳಿಗೆಗಳಲ್ಲಿ ಈ ಸುದ್ದಿ ಎಲ್ಲೆಡೆ ಹರಡಿಕೊಂಡಿತು. ಅನುಯಾಯಿಗಳ ಪ್ರತಿಕ್ರಿಯೆಯನ್ನು ವರ್ಣಿಸುವುದಕ್ಕಿಂತ ಕಲ್ಪನೆ ಮಾಡಿಕೊಳ್ಳುವುದು ಉತ್ತಮವಾದದ್ದು. ರಾತ್ರಿಕಾಲದ ನಿಶ್ಯಬ್ದತೆಯೊಳಗಿಂದ ಒಬ್ಬರ ನಂತರ ಒಬ್ಬರು ಅಟ್ಟದ ಮೆಟ್ಟಿಲುಗಳನ್ನೇರಿ ಈ ಮೊದಲು ಯಾರೂ ನೋಡಿರದಂತಹದನ್ನು ನೋಡಲು ಬಂದರು. ಅವರು ನೋಡಿದ್ದು ಮೃತ್ಯುವಾಗಿರಲಿಲ್ಲ, ಪುನರುಜ್ಜೀವನ–ವಾಗಿರಲಿಲ್ಲ, ನಿರ್ವಾಣದಲ್ಲಿ ಹಿಂದೆಗೆದುಕೊಂಡು ಹೋದದ್ದಾಗಿರಲಿಲ್ಲ, ಆದರೆ ಭವ್ಯ ಪ್ರಶಾಂತತೆ ಅಲ್ಲಿತ್ತು, ಸಾಮರ್ಥ್ಯದೊಡನೆ ಹಿಗ್ಗುವಿಕೆ ಹಾಗೂ ಕುಗ್ಗುವಿಕೆ ಮಾಡುತ್ತಿದ್ದ ಮೃತ್ಯುವಿತ್ತು, ಪ್ರತಿಯೊಂದು ಅಂಗದಲ್ಲಿ ಪ್ರಕಾಶ ಹಾಗೂ ಸೌಂದರ್ಯಗಳಿದ್ದವು, ಅದು ರಾಜರುಗಳ ರಾಜನ ದೇಹದಲ್ಲಿ ಮೃತ್ಯು ಅಮರವಾಗಿದ್ದ ಹಾಗಿತ್ತು. ಭೌತದ್ರವ್ಯದ ಸ್ಪರ್ಶಮಣಿಯಲ್ಲಿ ದೈವೀ ಸತ್ಯ

ಎದ್ದುಕಾಣುವ ಹಾಗೆ ಮಾಡಿದಂತಿತ್ತು, ಅದು ಇನ್ನು ಮುಂದೆ ದೇಹವಾಗಿರಲಿಲ್ಲ, ಆದರೆ ದೈವೀ ಸತ್ಯವನ್ನು ಅರ್ಧ ಮುಚ್ಚಿಹಾಕಿರುವ, ಅರ್ಧ ತೆರೆದು ತೋರಿಸುವ ಸುವರ್ಣವರ್ಣದ ಮುಚ್ಚಳದಂತಿತ್ತು. ಆಂತರಿಕ ದೃಷ್ಟಿಯುಳ್ಳವರು ದೈವೀ ಸತ್ಯವನ್ನು ಅರಿತುಕೊಂಡರು, ಮತ್ತು ಆಂತರಿಕ ಕಿವಿಗಳನ್ನು ಹೊಂದಿದವರು ತಮ್ಮ ಹೃದಯದ ನಿಶ್ಚಲ ಗುಹೆಯಿಂದ "ನಾನಿಲ್ಲಿದ್ದೇನೆ, ನಾನಿಲ್ಲಿದ್ದೇನೆ" ಎಂದು ಸೀಳಿಕೊಂಡು ಬರುವ ಕೂಗನ್ನು ಕೇಳಿಸಿಕೊಂಡರು.

ಜಾಗ್ರತಗೊಂಡ ಆ ಪ್ರಜ್ಞೆಯಲ್ಲಿ ನಾವು, ದೈವೀ ಪ್ರಭು ನಮಗಾಗಿ ಇರಿಸಿದ ದೈವೀ ಗುರಿಯತ್ತ ಹೆಜ್ಜೆ ಇರಿಸುತ್ತ ಸಾಗಿದ್ದೇವೆ, ಆ ಗುರಿಗಾಗಿ ಅವರು ತಮ್ಮ ಕೊನೆಯ ಉಸಿರಿರುವವರೆಗೆ ಕಾರ್ಯ ಕೈಕೊಂಡಿದ್ದಾರೆ ಮತ್ತು ಅದನ್ನು ಸಿದ್ಧಿಸಿಕೊಳ್ಳುವವರೆಗೆ ಆ ಕಾರ್ಯವನ್ನು (ಸೂಕ್ಷ್ಮ ಭೌತಿಕ ಸ್ತರದಿಂದ) ಮುಂದುವರಿಸಿಕೊಂಡು ಹೋಗುತ್ತೇನೆ ಎಂಬ ವಚನ ನೀಡಿದ್ದಾರೆ. ಪರಮೋಚ್ಚ ಸೃಷ್ಟಿಕರ್ತೆಯಾದ ಹಾಗೂ ಆ ಗುರಿಯನ್ನು ಸಿದ್ಧಿಸಿಕೊಂಡ ಶ್ರೀಮಾತೆಯವರು ನಮಗೆ ಮಾರ್ಗದರ್ಶಕರಾಗಿದ್ದಾರೆ, ಹಾಗೂ ದೇವಿಯಾಗಿದ್ದಾರೆ. ಬರಿದು ಮಾಡಲಾಗದ ಶ್ರೀ ಅರವಿಂದರ ಶ್ರೀಮಂತಗೊಂಡ ಎಲ್ಲ ರಹಸ್ಯ ಹಾಗೂ ಆಧ್ಯಾತ್ಮಿಕ ಸಿದ್ಧಿಗಳು, ಸ್ವಯಂಚಾಲಿತವಾಗಿ, ಶ್ರೀಮಾತೆಯವರಲ್ಲಿ ಸಾಗಿ ಹೋದವು. ನಮಗೆ ಆ ಎರಕವನ್ನು ಮತ್ತು ಭವಿಷ್ಯತ್ತಿನ ಮಾದರಿಯ ಮನುಕುಲ ಎಂದು ಶ್ರೀ ಅರವಿಂದರು ದರ್ಶನದಲ್ಲಿ ಕಂಡುಕೊಂಡುದುದಕ್ಕೆ ಆಕಾರ ಕೊಡಲು ಅವರು ಶ್ರಮಿಸುತ್ತಿದ್ದಾರೆ. ಶ್ರೀ ಅರವಿಂದರ ದೇಹತ್ಯಾಗದ ಭವ್ಯ ಘಟನೆಯ ನಂತರ ಆಶ್ರಮಕ್ಕೆ ಭೇಟಿ ನೀಡಿದವರು ಯಾರೇ ಆಗಿರಲಿ, ಅವರ ಆ ಯಜ್ಞಾಹುತಿ ಪ್ರತಿಯೊಬ್ಬನ ಹೃದಯದಲ್ಲಿ ಹುಟ್ಟುಹಾಕಿದ ವಿಜಯಕ್ಕಾಗಿರುವ ಸಂಕಲ್ಪದಿಂದ ಪ್ರಭಾವಿತರಾಗದೆ ಇರುವುದು ಸಾಧ್ಯವಿಲ್ಲ. ಅವರ ಸಮಾಧಿಯಿಂದ ಸಾವಿರಾರು ಜ್ವಾಲೆಗಳು ಮೇಲಕ್ಕೇರಿ ಹೋಗುತ್ತವೆ, ಅವು ನಮ್ಮ ಆತ್ಮದಲ್ಲಿ ವಾಸಮಾಡಿ ಎಂದೆಂದಿಗೂ ಪುನರ್ಯೌವನಗೊಳಿಸುವ ಜ್ವಾಲೆಯಾಗಿ ಉರಿಯುತ್ತವೆ, ಅದು ಹಾಗಿರುವಾಗ ಅವರ ದೈವೀ ಸಾನ್ನಿಧ್ಯ ಆವರಿಸುತ್ತ, ಮುಳುಗುಹಾಕುತ್ತ ಶ್ರೀಮಾತೆಯವರ ಸತ್ತೆಯಿಂದ ಹಾಗೂ ದೇಹದಿಂದ ಹೊರಸೂಸುತ್ತ ಇಡೀ ವಾತಾವರಣವನ್ನು ವ್ಯಾಪಿಸುತ್ತಿದೆ. ಮನುಷ್ಯ ಅವರ ಸಾನ್ನಿಧ್ಯದ ದರ್ಶನ ಪಡೆಯಬಲ್ಲ, ಅವರ ಹೆಜ್ಜೆ ಸಪ್ಪಳವನ್ನು, ಲಯಬದ್ಧ ಧ್ವನಿಯನ್ನು ಕೇಳಬಲ್ಲ, ಅದು ಯಾವಾಗಲೂ ಜಾಗರೂಕವಾಗಿರುತ್ತದೆ, ಭೌತಿಕ ದೇಹದ ಕಿರುಕುಳದಿಂದ



ಮುಕ್ತವಾಗಿರುತ್ತದೆ. ಒಂದುದಿನ ಅವರ ಯಜ್ಞಾಹುತಿ ಫಲಪ್ರದವಾಗಲಿದೆ, 'ಸಾವಿತ್ರಿ'ಯಲ್ಲಿ ಚಿತ್ರಿಸಿದ್ದು ಸತ್ಯವಾಗಲಿದೆ. ಏಕೆಂದರೆ ಶ್ರೀಮಾತೆಯವರು ಮತ್ತು ಶ್ರೀ ಅರವಿಂದರು ಇವರ ಆಂತರಿಕ ಜೀವನದ ಪ್ರಸಂಗಗಳ ವರ್ಣನೆಯ ಹೊರತಾಗಿ 'ಸಾವಿತ್ರಿ'ಯಲ್ಲಿ ಬೇರೇನಿದೆ? ಸಾವಿತ್ರಿಯಲ್ಲಿ ಅವರು ಚಿತ್ರಿಸಿದ್ದನ್ನು ಜಗತ್ತಿನ ವೇದಿಕೆಯ ಮೇಲೆ ನಿಷ್ಠೆಯಿಂದ ಅಭಿನಯಿಸಲಾಗಿದೆ. ಆ ಅದ್ಭುತ ನಾಟಕದ ಮೊದಲ ಭಾಗದ ಮೇಲೆ ಪರದೆ ಬಿದ್ದಿದೆ, ನಂತರದ್ದನ್ನು ಪರದೆಯ ಹಿಂದಿದ್ದು ನಿರ್ವಹಿಸಲಾಗುತ್ತದೆ. ಕೊನೆಯ ಅತ್ಯಂತ ಹೆಚ್ಚಿನ ವಿರೋಧೀ ಶಕ್ತಿಯೊಂದಿಗೆ ಯುದ್ಧ ನಿಂತು ಹೋಗಿಲ್ಲ, ಅದು ಪೃಥ್ವಿಯ ರಣಾಂಗಣದ ಮೇಲೆ ತೋರಿಕೆಯ ವಿಫಲತೆ ಕಂಡುಕೊಂಡರೂ, ರಹಸ್ಯ ಸ್ತರಗಳಲ್ಲಿ ಭೀಕರವಾಗಿ ರೋಷಾವೇಶದಿಂದ ರೇಗಿಬೀಳುತ್ತಿದೆ. ದ್ವಂದ್ವ ಕೊನೆಗೊಂಡ ನಂತರ ಪರದೆಯನ್ನು ಎತ್ತಲಾಗುವುದು, ಮೃತ್ಯುವಿನ ಪ್ರಕರಣ(Book of Death)ದ ತುಂಬುನಾದದ ವಿಸ್ತೃತ ಕಥನವನ್ನು ನಾವು ಕೇಳುವೆವು, ಪೃಥ್ವಿಯ ವೇದಿಕೆಯ ಮೇಲೆ ಉಪಸಂಹಾರ (epilogue) ಭೌತಿಕ ರೂಪ ತಾಳಿದ್ದನ್ನು ನೋಡುವೆವು, ಜಗತ್ತಿನಾದ್ಯಂತ ವಿಜಯದ ಮೈವೆತ್ತ, ಭಾವೋನ್ನತತ್ತೆಯುಳ್ಳ ಕೂಗು: "ನಾನಿಲ್ಲಿದ್ದೇನೆ, ನಾನಿಲ್ಲಿದ್ದೇನೆ" ಪ್ರತಿಧ್ವನಿತಗೊಳ್ಳುವುದು.

**(Nirodbaran "I am here, I am here" pp. 16–24)**

**ಪ್ರಶ್ನೆ :** *ಮಧುರ ಮಾತೆಯವರೆ,*

*ನಾನು ರಾತ್ರಿ ನಿದ್ರೆ ಮಾಡುವುದಕ್ಕೆ ತೆರಳುವುದಕ್ಕಿಂತ ಮೊದಲು 'ಸಾವಿತ್ರಿ' ಗ್ರಂಥವನ್ನು ಇಲ್ಲವೆ ನಿಮ್ಮ ಒಂದು ಪುಸ್ತಕವನ್ನು ಓದುವ ರೂಢಿಯನ್ನಿಟ್ಟುಕೊಂಡಿದ್ದೆ. ಆದರೆ ಈಗ ನಾನು ಆ ರೂಢಿಯನ್ನು ಕಳೆದುಕೊಂಡಿದ್ದೇನೆ, ಅಲ್ಲದೆ ದಿನಾಲು ಸಮಾಧಿಯತ್ತ ನಿಯಮಿತವಾಗಿ ಹೋಗುತ್ತಿಲ್ಲ. ಈ ವಿಷಯಗಳ ನಿಜವಾದ ಮೌಲ್ಯ ನನಗೆ ತಿಳಿದಿಲ್ಲ. ಅವುಗಳನ್ನು ಕ್ರಮಬದ್ಧವಾಗಿ ಕೈಕೊಳ್ಳಬೇಕೋ ಇಲ್ಲವೆ ಮನುಷ್ಯ ಅವುಗಳನ್ನು ಕೈಕೊಳ್ಳಬೇಕು ಎಂದೆನಿಸಿದಾಗ ಕೈಕೊಳ್ಳಬೇಕೋ? ಇವುಗಳನ್ನು ಏಕೆ ಕೈಕೊಳ್ಳಬೇಕು ಮತ್ತು ಹೇಗೆ ಕೈಕೊಳ್ಳಬೇಕು?*

**ಶ್ರೀಮಾತೆ :** ಮನುಷ್ಯ ತನ್ನ ಬುದ್ಧಿಮತ್ತೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಆಳಾತಿ ಆಳದಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳಲು 'ಸಾವಿತ್ರಿ' ಮಹಾಕಾವ್ಯವನ್ನು ಓದುತ್ತಾನೆ.

ಸಮಾಧಿಯ ಮೇಲೆ ಏಕಾಗ್ರತೆ ವಹಿಸುವ ಮನುಷ್ಯ ಶ್ರೀ ಅರವಿಂದರೊಡನೆ ಸಂಪರ್ಕ ಬೆಳೆಸುತ್ತಾನೆ ಹಾಗೂ ಅವರ ಸಹಾಯ ಪಡೆಯುತ್ತಾನೆ, ಅವರಲ್ಲಿ ಅವನ ಭಕ್ತಿ ಬೆಳೆಯುತ್ತದೆ.

ಈ ವಿಷಯಗಳು ನಿನಗೆ ಮೌಲ್ಯವುಳ್ಳವುಗಳಾದರೆ, ನೀನು ಅವುಗಳನ್ನು ಕ್ರಮಬದ್ಧವಾಗಿ ಕೈಕೊಳ್ಳಬೇಕು. ಪ್ರಜ್ಞೆಯ ಆಲಸ್ಯತನ ಅವುಗಳನ್ನು ಕೈಕೊಳ್ಳಲಾಗದಂತೆ ನಿನ್ನನ್ನು ಇರಿಸುತ್ತದೆ.

ನೀನು ಆಧ್ಯಾತ್ಮಿಕ ಹಾಗೂ ಪ್ರಜ್ಞಾಪೂರ್ಣ ಜೀವನಕ್ಕಾಗಿ ಜನಿಸಿರುವಿ – ಆದರೆ ಬಹುಶಃ ಇದನ್ನು ತಿಳಿದುಕೊಳ್ಳುವುದಕ್ಕೆ ನೀನಿನ್ನೂ ಬಹಳ ಚಿಕ್ಕವನಾಗಿರುವಿ.

ಆಶೀರ್ವಾದಗಳು.

**(CWM, 16/397)** – ಶ್ರೀಮಾತೆ

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ನವೆಂಬರ್ 2015 ರ ಮಂಗಳವಾರದಂದು "ಶ್ರೀಮಾತೆಯವರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಅದೇ ದಿನ ಸಾಯಂಕಾಲ 5.00 ಗಂಟೆಯಿಂದ 6.30 ಗಂಟೆಯವರೆಗೆ "Role of The Divine Mother in Sri Aurobindo's Yoga" ಎಂಬ ವಿಷಯದ ಬಗ್ಗೆ ಡಾ॥ ಜಿ.ಬಿ. ಹರೀಶ, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 24ನೇ ನವೆಂಬರ್ 2015 ರ ಮಂಗಳವಾರದಂದು "ಶ್ರೀ ಅರವಿಂದರ ಸಿದ್ಧಿ"ಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ



ಸಾಯಂಕಾಲ 5.00 ಗಂಟೆಯಿಂದ 6.30 ರವರೆಗೆ ಶ್ರೀ ಭಾಸ್ಕರ ರೆಡ್ಡಿಯವರಿಂದ "THE NEW BECOMING OF MAN" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.



*All here must learn to obey a higher law,*
*Our body's cells must hold*
*the Immortal flame.*

- Sri Aurobindo

RNI No. 22511/1971
No. of Pages **48 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-201
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.